
ದೆಹಲಿ ಕರ್ನಾಟಕ ಸಂಘದ

# ಅಭಿಮತ

ಸೆಪ್ಟೆಂಬರ್ 2020
ಬೆಲೆ ರೂ. 1



## ಡಾ. ಚಂದ್ರಶೇಖರ ಪಾಟೀಲರಿಗೆ ಸಂಘದ ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಪ್ರದಾನ

## ಸಂಘದಲ್ಲಿ ಸ್ವಾತಂತ್ರ್ಯೋತ್ಸವ



ದಿನಾಂಕ 15.08.2020ರಂದು ದೆಹಲಿ ಕರ್ನಾಟಕ ಸಂಘದಲ್ಲಿ 74ನೇ ಸ್ವಾತಂತ್ರ್ಯೋತ್ಸವವನ್ನು ಸರಳವಾಗಿ ಆಚರಿಸಲಾಯಿತು. ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಧ್ವಜಾರೋಹಣ ಮಾಡಿ ಶುಭ ಹಾರೈಸಿದರು. ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಜಂಟಿ ಕಾರ್ಯದರ್ಶಿ ರಾಧಾಕೃಷ್ಣ, ಕಾರ್ಯಕಾರಿ ಸಮಿತಿಯ ಸದಸ್ಯರಾದ ಎನ್.ಆರ್. ಶ್ರೀನಾಥ್ ಮತ್ತು ಸಂತೋಷ ಜೆ. ಹಾಗೂ ಹಿರಿಯ ಕನ್ನಡಿಗ ಚೆನ್ನು ಎಸ್. ಮಠದ ಮತ್ತಿತರ ಕನ್ನಡಿಗರು ಪಾಲ್ಗೊಂಡರು.

## ಸಂಘದಲ್ಲಿ ಗಣೇಶೋತ್ಸವ



ದೆಹಲಿ ಕರ್ನಾಟಕ ಸಂಘದಲ್ಲಿ ಗಣೇಶ ಸಾಂಸ್ಕೃತಿಕ ಉತ್ಸವವವನ್ನು ದಿನಾಂಕ 22.08.2020ರಂದು ಆಚರಿಸಲಾಯಿತು. ಬೆಳಗ್ಗಿನ ಗಣೇಶ ಪ್ರತಿಷ್ಠಾಪನಾ ಪೂಜೆಯನ್ನು ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಮತ್ತು ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ನಡೆಸಿಕೊಟ್ಟರು. ವಿಸರ್ಜನಾ ಕಾರ್ಯಕ್ರಮ ಜಂಟಿ ಕಾರ್ಯದರ್ಶಿ ರಾಧಾಕೃಷ್ಣ ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಸಂತೋಷ ಜೆ. ಅವರು ನಡೆಸಿಕೊಟ್ಟರು. ಕೊರೊನಾ ಕಾರಣದಿಂದ ಈ ಬಾರಿ ಉತ್ಸವವನ್ನು ಸರಳವಾಗಿ ಆಚರಿಸಲಾಯಿತು.

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 30 । ಸಂಚಿಕೆ 12
ಸೆಪ್ಟೆಂಬರ್ 2020

**ಪ್ರಧಾನ ಸಂಪಾದಕ**
ಡಾ. ಅವನೀಂದ್ರನಾಥ್ ರಾವ್

**ಸಂಪಾದಕ ಮಂಡಳಿ ಸದಸ್ಯರು**
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ಡಾ. ವೆಂಕಟಾಚಲ ಜಿ. ಹೆಗಡೆ

**ಉಪಾಧ್ಯಕ್ಷರು**
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

**ಪ್ರಧಾನ ಕಾರ್ಯದರ್ಶಿ**
ಸಿ.ಎಂ. ನಾಗರಾಜ

**ಕೋಶಾಧಿಕಾರಿ**
ಆಶಾಲತಾ ಎಂ.

**ಜಂಟಿ ಕಾರ್ಯದರ್ಶಿಗಳು**
ರಾಧಾಕೃಷ್ಣ
ಪೂಜಾ ರಾವ್

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

## ಸಂಪಾದಕೀಯ

# ಜೆ.ಎನ್.ಯು. ಕನ್ನಡ ಪೀಠ ಸದಾ ಬೆಳೆಯಲಿ

ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ಭಾರತದ ಅತ್ಯಂತ ಪ್ರತಿಷ್ಠಿತ ಮತ್ತು ಹೆಮ್ಮೆಯ ವಿಶ್ವವಿದ್ಯಾಲಯ. ತನ್ನ ಶೈಕ್ಷಣಿಕ ಹಿರಿಮೆಗಳಿಂದ ತೊಡಗಿ, ವಿದ್ಯಾರ್ಥಿ ಚಳುವಳಿಗಳವರೆಗೆ ಸದಾ ಕಾಲ ಸುದ್ದಿ ಮತ್ತು ಜನಪ್ರಿಯತೆಯನ್ನು ಕಾಯ್ದುಕೊಂಡು ಬಂದಿರುವ ಜೆ.ಎನ್.ಯು. ಐದು ದಶಕಗಳ ಇತಿಹಾಸ ಹೊಂದಿದೆ.

ಮೂರು ವರ್ಷಗಳ ಹಿಂದೆ ಜೆ.ಎನ್.ಯು. ರಾಷ್ಟ್ರಪತಿಗಳಿಂದ 'ಭಾರತದ ಶ್ರೇಷ್ಠ ವಿಶ್ವವಿದ್ಯಾಲಯ' ಎಂಬ ಗೌರವ ಪಡೆದಿದೆ. ಈಚೆಗೆ ಇಲ್ಲಿನ ಹಳೆವಿದ್ಯಾರ್ಥಿ ಪ್ರೊ. ಅಭಿಜಿತ್ ಬ್ಯಾನರ್ಜಿ ಅರ್ಥಶಾಸ್ತ್ರಕ್ಕೆ ನೊಬೆಲ್ ಬಹುಮಾನ ಪಡೆದಾಗ ಅದು ಮತ್ತೆ ವಿಶ್ವದ ಗಮನ ಸೆಳೆದಿತ್ತು. 2015ರಲ್ಲಿ ಕರ್ನಾಟಕ ಸರಕಾರದ ಸಹಾಯದಿಂದ ಇಲ್ಲಿ ಕನ್ನಡ ಅಧ್ಯಯನ ಪೀಠ ಆರಂಭಗೊಂಡಿದ್ದು ಕನ್ನಡಿಗರ ಅತ್ಯಂತ ಸಂತಸದ ಮತ್ತು ಹೆಮ್ಮೆಯ ಕ್ಷಣಗಳಲ್ಲಿ ಒಂದು. ಜೆ.ಎನ್.ಯು. ಕನ್ನಡ ಅಧ್ಯಯನ ಪೀಠ ಆರಂಭಗೊಂಡು ಕಳೆದ ಜುಲಾಯಿ ತಿಂಗಳು ಐದು ವರ್ಷ ಪೂರೈಸಿದೆ.

ಜೆ.ಎನ್.ಯು.ನಲ್ಲಿ ಕನ್ನಡ ಅಧ್ಯಯನ ವಿಭಾಗವೊಂದು ಆರಂಭಗೊಳ್ಳಬೇಕು ಎಂಬ ಮಹತ್ವದ ಆಕಾಂಕ್ಷೆ ಒಡಮೂಡಿದ್ದು ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಎಂಬುವುದನ್ನು ಮರೆಯಲಾಗದು. ಮತ್ತು ಅದು ಸ್ಥಾಪನೆಗೊಳ್ಳುವವರೆಗೆ ಸಂಘ ಪ್ರತಿ ಹಂತದಲ್ಲೂ ಸಹಕರಿಸುತ್ತಲೇ ಬಂದಿತ್ತು. 2005ರಲ್ಲಿ ಸಂಘದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದ ಅಂಗವಾಗಿ 'ರಾಜಧಾನಿಯಲ್ಲಿ ಕರ್ನಾಟಕ' ಎಂಬ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು. ಇಲ್ಲಿ 'ರಾಜಧಾನಿಯಲ್ಲಿ ಕನ್ನಡದ ಸಬಲೀಕರಣ' ಕುರಿತು ಮಾತನಾಡುತ್ತ ಹಿರಿಯ ಸಾಹಿತಿ ದಿ. ಪ್ರೊ. ಯು.ಆರ್. ಅನಂತಮೂರ್ತಿ ಅವರು ಜೆ.ಎನ್.ಯು.ನಲ್ಲಿ 'ಸೆಂಟರ್ ಫಾರ್ ಕರ್ನಾಟಕ ಸ್ಟಡೀಸ್' ಆರಂಭಿಸಬೇಕು ಎಂಬ ಕನಸಿನ ಬೀಜ ಬಿತ್ತಿದ್ದರು. ಅಲ್ಲದೆ 'ಫ್ರೆಂಡ್ಸ್ ಆಫ್ ಕರ್ನಾಟಕ' ಎಂಬ ಸಮೂಹವನ್ನು ರೂಪಿಸಬೇಕು ಎಂಬ ಪರಿಕಲ್ಪನೆಯನ್ನು ನೀಡಿದ್ದರು. ಅಂದು ಸಂಘದ ಅಧ್ಯಕ್ಷರಾಗಿದ್ದ ಡಾ. ಪುರುಷೋತ್ತಮ ಬಿಳಿಮಲೆಯವರೇ ಮುಂದೆ ಜೆ.ಎನ್.ಯು.ನಲ್ಲಿ ಕನ್ನಡ ಅಧ್ಯಯನ ಪೀಠದ ಮೊದಲ ಪ್ರಾಧ್ಯಾಪಕರಾಗಿ ಅದನ್ನು ಕಟ್ಟಿ ಬೆಳೆಸಿ ಸಾಕಾರಗೊಳಿಸಿದರು ಎನ್ನುವುದು ವಿಶೇಷ ಮತ್ತು ಗಮನಾರ್ಹ.

ಡಾ. ಬಿಳಿಮಲೆ ಅವರು ಕಳೆದ ತಿಂಗಳು ಸೇವೆಯಿಂದ ನಿವೃತ್ತರಾಗಿದ್ದಾರೆ. ಕನ್ನಡದ ಅಭಿಜಾತ ಕೃತಿಗಳ ಇಂಗ್ಲೀಷ್ ಅನುವಾದ, ಮಹತ್ವದ ವಿಚಾರ ಸಂಕಿರಣಗಳು, ಉಪನ್ಯಾಸಗಳು, ಕಮ್ಮಟಗಳು ಅಲ್ಲದೆ ಕನ್ನಡೇತರರಿಗೆ ಕನ್ನಡ ಕಲಿಕೆ, ವಿಸ್ತರಣಾ ಚಟುವಟಿಕೆಗಳ ಮೂಲಕ ಡಾ. ಬಿಳಿಮಲೆಯವರು ಕನ್ನಡ ಪೀಠವನ್ನು ಅರ್ಥಪೂರ್ಣವಾಗಿ ಮುನ್ನಡೆಸಿ ಅಭಿವೃದ್ಧಿಗೊಳಿಸಿದ್ದಾರೆ. ಈ ಸಂದರ್ಭದಲ್ಲಿ ಅವರ ಆತ್ಮಕತೆ 'ಕಾಗೆ ಮುಟ್ಟಿದ ನೀರು' ಪ್ರಕಟಗೊಂಡು ಸಾಹಿತ್ಯ ವಲಯದಲ್ಲಿ ಸಂಚಲನ ಮೂಡಿಸಿದೆ. ಅಲ್ಲದೆ ಈ ಕೃತಿ ಈಗ ಮೂರನೇ ಮುದ್ರಣಕ್ಕೆ ಸಜ್ಜಾಗಿದೆ. ಬಿಳಿಮಲೆಯವರ ಕೆಲಸಗಳು ಸಾರ್ಥಕ ಮತ್ತು ಮಾದರಿ ಎನಿಸಿವೆ. ವಿಶ್ರಾಂತ ಬದುಕಿಗೆ ಮರಳಿರುವ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ನಮ್ಮ ಅಭಿನಂದನೆಗಳು ಮತ್ತು ಹಾರ್ದಿಕ ಶುಭಾಶಯಗಳು.

ಜೆ.ಎನ್.ಯು. ಕನ್ನಡ ಪೀಠಕ್ಕೆ ನೂತನ ಪ್ರಾಧ್ಯಾಪಕರ ನೇಮಕಾತಿ ತ್ವರಿತಗತಿಯಲ್ಲಿ ಆಗಿದೆ. ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಧ್ಯಾಪಕ ಡಾ. ವಿಶ್ವನಾಥ್ ಅವರು ನೇಮಕಗೊಂಡಿದ್ದಾರೆ. ಕರ್ನಾಟಕದಲ್ಲಿ ಸ್ಥಳನಾಮಗಳ ಮತ್ತು ಅದರ ಸಾಂಸ್ಕೃತಿಕ ಹಿನ್ನಲೆ ಕುರಿತು ಅವರು ಹಲವು ಕೃತಿಗಳನ್ನು ಬರೆದಿದ್ದಾರೆ. ಅಧ್ಯಯನಶೀಲರಾಗಿರುವ ಡಾ. ವಿಶ್ವನಾಥ್ ಅವರು ಮುಂದಿನ ದಿನಗಳಲ್ಲಿ ಕನ್ನಡ ಪೀಠವನ್ನು ಇನ್ನಷ್ಟು ಅಭಿವೃದ್ಧಿ ಪಡಿಸಲಿ ಎಂದು ಹಾರೈಸುವ.

ಡಾ. ಬಿ.ಎ. ವಿವೇಕ ರೈ, ಡಾ. ಟಿ.ಎಸ್. ಸತ್ಯನಾಥ್, ಡಾ. ಎಚ್.ಎಸ್. ಶಿವಪ್ರಕಾಶ್ ಮೊದಲಾದ ತಜ್ಞರ ಸಮಿತಿ, ಸಲಹೆಗಳೊಂದಿಗೆ ಈಗಾಗಲೇ ಕನ್ನಡ ಪೀಠದಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಆರಂಭಿಸುವ ಕುರಿತು ಡಾ. ಬಿಳಿಮಲೆ ಅವರು ಮಾರ್ಗದರ್ಶಿ ಕಾರ್ಯಗಳನ್ನು ನಡೆಸಿದ್ದಾರೆ. ಇದರೊಂದಿಗೆ ಮುಂದಿನ ದಿನಗಳಲ್ಲಿ ಕರ್ನಾಟಕದ ವಚನ ಸಿರಿ, ಜಾನಪದ ಸಿರಿ ಇತ್ಯಾದಿಗಳ ಕುರಿತು ಸಂವಾದಗಳು ನಡೆಯಲಿ. ಮಹತ್ವದ ಅನುವಾದ ಕೃತಿಗಳೂ ಬರಲಿ. ಕನ್ನಡೇತರರಿಗೆ ಮತ್ತು ವಿಶ್ವಕ್ಕೆ ಕನ್ನಡದ ಕಂಪು ಹರಡಲಿ. ಕನ್ನಡದ ಹಿರಿಮೆ ತಿಳಿಯಲಿ. ಜೆ.ಎನ್.ಯು. ಕನ್ನಡ ಅಧ್ಯಯನ ಪೀಠ ಸದಾ ಕಾಲ ಬೆಳೆಯಲಿ, ಬೆಳಗಲಿ ಎಂದು ಆಶಿಸುವ.

ಡಾ. ಅವನೀಂದ್ರನಾಥ್ ರಾವ್

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 30 ಸಂಚಿಕೆ 12
ಸೆಪ್ಟೆಂಬರ್ 2020, ಬೆಲೆ ರೂ. 1

## ನಮ್ಮನಮ್ಮೊಳಗೆ

# ದೆಹಲಿಯ ಕೋವಿಡ್ ಡೈರಿ: ಎಣೆಯಿಲ್ಲದ ಆತಂಕದ ಕ್ಷಣಗಳು

ದೆಹಲಿಯಲ್ಲಿ ನಾವು ಬೇಸಿಗೆಯ ಬಿಸಿಯನ್ನು ನಿಧಾನವಾಗಿ ತಳ್ಳಿ ಚಳಿಗಾಲದತ್ತ ಕಾಲಿಡುವ ಆಶಯದಲ್ಲಿದ್ದೇವೆ. ಆದರೆ, ಯಾಕೊ ಸೆಕೆರಾಯ ಹೆಚ್ಚಿದ ಆರ್ದ್ರತೆಯೊಂದಿಗೆ ಸೇರಿಕೊಂಡು ನಮ್ಮೆಲ್ಲರಿಗೂ ಇನ್ನೂ ಸಂಕಟವನ್ನು ಉಂಟು ಮಾಡುತ್ತಿದ್ದಾನೆ. ಈ ಬಾರಿ ಮಳೆರಾಯ ಅಕ್ಟೋಬರ ಮೊದಲ ವಾರದಿಂದ ತನ್ನ ಹಿಮ್ಮೆಟ್ಟುವ ಕಾರ್ಯವನ್ನು ಆರಂಭಿಸಲಿದ್ದಾನೆ ಎಂಬುದು ನಮ್ಮ ಹವಾಮಾನ ಇಲಾಖೆಯವರ ಅಂಬೋಣ. ಅಂತೂ ಅಕ್ಟೋಬರನಿಂದ ನಮಗೆ ಈ ಬಿಸಿಲ ಬೇಗೆಯಿಂದ ಮುಕ್ತಿ ದೊರೆಯಲೆಂದು ಹಾರೈಸೋಣ.

ಕೋವಿಡ್-19 ರ ಹಿನ್ನಲೆಯಲ್ಲಿ ಈ ಬಾರಿ ದೆಹಲಿಯಲ್ಲಿ ಮಳೆಯ ಪ್ರಕೋಪ ಕಡಿಮೆಯಾಗಿದ್ದರಿಂದ ಡೆಂಗುವಿನಂತಹ ಕಾಯಿಲೆಗಳ ಉಪಟಳ ಅಷ್ಟಾಗಿ ದೆಹಲಿಗರನ್ನು ಕಾಡಲಿಲ್ಲ. ಹಾಗೆಂದು ಈ ಬಾರಿಯೂ ಮಳೆರಾಯ ಜೋರಾಗಿ ಕರ್ನಾಟಕದ ಹಲವಾರು ಜಿಲ್ಲೆಗಳನ್ನು, ಅದರಲ್ಲೂ ಕರಾವಳಿ ಜಿಲ್ಲೆಗಳನ್ನು, ಅಪ್ಪಳಿಸಿದ್ದು ನಾವೆಲ್ಲ ಬದಲಾಗುತ್ತಿರುವ ಹವಾಮಾನದ ವೈಪರಿತ್ಯಗಳ ಕುರಿತಾಗಿ ಯೋಚಿಸುವಂತಾಗಿದೆ. ಮುಂಬೈ ಮತ್ತು ಗುಜರಾತ್‌ನ ತನಕ ಸಾಕಷ್ಟು ಮಳೆರಾಯನಾಟ ನಡೆದಿದೆ. ಮುಂಬೈಯಲ್ಲಂತೂ ಕೋವಿಡ್ ಜೊತೆಜೊತೆಯಾಗಿ ಮಳೆಯ ಅಬ್ಬರ ಜನಜೀವನವನ್ನು ಹದಗೆಡಿಸಿಬಿಟ್ಟಿತ್ತು. ಅತ್ತ ದೇಶದ ಪೂರ್ವ ಮತ್ತು ಈಶಾನ್ಯ ಭಾಗದಲ್ಲಿ ಎಂದಿಗಿಂತಲೂ ಹೆಚ್ಚಿನ ಮಳೆಯಾಗಿ ಮಹಾಪೂರದ ಹಾವಳಿ ಜನರ ಜೀವನವನ್ನು ಹದಗೆಡಿಸಿ ಬಿಟ್ಟಿದೆ. ಈಗ ಎಲ್ಲವೂ ನಿಧಾನವಾಗಿ ಸಾಮಾನ್ಯ ಸ್ಥಿತಿಗೆ ಮರಳುವ ಚಿಹ್ನೆಗಳು ಕಾಣುತ್ತಿವೆ.

ಇತ್ತ ದೇಶದಾದ್ಯಂತ ಕೋವಿಡ್-19 ರ ರೌದ್ರ ನರ್ತನ ಇನ್ನೂ ನಡೆಯುತ್ತಲೆ ಇದೆ. ಇದಕ್ಕೆ ತಮ್ಮ ಜೀವ ತೆತ್ತವರ ಸಂಖ್ಯೆ ಲಕ್ಷ ದಾಟುವತ್ತ ತನ್ನ ದಾಪುಗಾಲನ್ನು ಹಾಕುತ್ತಿದೆ. ದಿನವೊಂದರಲ್ಲಿ ಎಂಬತ್ತರಿಂದ ತೊಂಬತ್ತು ಸಾವಿರದಷ್ಟು ಕೋವಿಡ್‌ನ ವಿಸ್ತ್ರತ ಬಲೆಗೆ ನಮ್ಮ ದೇಶದ ವಿವಿಧ ಭಾಗಗಳಲ್ಲಿ ಜನ ಸಿಲುಕಿಕೊಳ್ಳುತ್ತಿದ್ದಾರೆ. ಅದರಲ್ಲೂ ಮುಂಬೈ, ಪುಣೆ, ಬೆಂಗಳೂರು, ಆಂಧ್ರ ಮತ್ತು ತಮಿಳುನಾಡುಗಳಲ್ಲಿ ಕೋವಿಡ್‌ನ ಸಂಖ್ಯೆ ಇನ್ನೂ ಏರುಮುಖದಲ್ಲೇ ಇರುವುದು ಆತಂಕಕ್ಕೆ ಕಾರಣವಾಗಿದೆ. ನೆಮ್ಮದಿಯ, ಸಹಜ ಜೀವನಕ್ಕೆ ನಾವೆಲ್ಲ ಮರಳುವುದೇ ಕಷ್ಟಸಾಧ್ಯವಾಗಿದೆ.

ಈಗ ತಾನೆ ನಮ್ಮ ಕರ್ನಾಟಕದ ಕೇಂದ್ರ ಮಂತ್ರಿಗಳಾದ ಸನ್ಮಾನ್ಯ ಶ್ರೀ ಸುರೇಶ ಅಂಗಡಿಯವರನ್ನು ನಾವು ಕಳೆದುಕೊಂಡೆವು. ಅವರು ಅತ್ಯಂತ ನಿಸ್ಪ್ರಹ ಮತ್ತು ಸರಳ ವ್ಯಕ್ತಿಗಳಾಗಿದ್ದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಿಗೆ ತಮ್ಮ ಬಿಡುವಿಲ್ಲದ ರೈಲ್ವೆ ಮಂತ್ರಾಲಯದ ಜವಾಬ್ದಾರಿಯ ಕೆಲಸದ ನಡುವೆಯೂ ಸ್ಪಂದಿಸುತ್ತಿದ್ದರು. ನಮ್ಮ ಸಂಘದ ನಿಯೋಗವು ಅವರನ್ನು ಭೇಟಿ ಮಾಡಲು ಅವರ ಮಂತ್ರಾಲಯದ ಕಚೇರಿಗೆ ಹೋದಾಗ ನಮಗಾಗಿ ಕಾದಿದ್ದು ಆತ್ಮೀಯವಾಗಿ ಬರಮಾಡಿಕೊಂಡು ವಿಶ್ವಾಸದಿಂದ ಮಾತನಾಡಿಸಿದ್ದನ್ನು ನಾವ್ಯಾರು ಮರೆಯುವಂತಿಲ್ಲ. ವಾರದ ಕೆಳಗೆ ನಾವು ಈಗತಾನೆ ರಾಜ್ಯಸಭಾ ಸದಸ್ಯರಾಗಿ ಚುನಾಯಿತರಾಗಿದ್ದ ಅಶೋಕ ಗಸ್ತಿಯವರನ್ನು ಕೋವಿಡ್‌ಗೆ ಕಳೆದುಕೊಂಡದ್ದು ಇನ್ನೊಂದು ಆಘಾತಕರವಾದ ಸುದ್ದಿಯಾಗಿತ್ತು.

ಇವರೆಲ್ಲರೂ ಈ ಕೋವಿಡನ್ನು ಜಯಿಸಿ ಮತ್ತೆ ತಮ್ಮ ಕಾರ್ಯಕ್ಷೇತ್ರಗಳಿಗೆ ಮರಳುವ ಆಶಯ ನಮ್ಮದೆಲ್ಲರದ್ದಾಗಿತ್ತು. ಆದರೆ ಈ ವಿಧಿ ಬಯಸಿದ್ದೆ ಇನ್ನೊಂದು. ಈಗತಾನೆ ಹಠಾತ್ತನೆ ಮುಗಿಸಲ್ಪಟ್ಟ ಸಂಸತ್ತಿನ ಮುಂಗಾರಿನ ಅಧಿವೇಶನಕ್ಕೆ ಬಂದವರಲ್ಲಿ ಮೂವತ್ತಕ್ಕೂಹೆಚ್ಚಿನ ಸದಸ್ಯರಿಗೆ ಕೋವಿಡ್‌ನ ಲಕ್ಷಣಗಳು ಇದ್ದದ್ದು ನಮಗೆಲ್ಲ ಇನ್ನೊಂದು ಗಾಬರಿಯ ಸುದ್ದಿ. ಲೋಕಸಭೆ ಮತ್ತು ರಾಜ್ಯಸಭೆಯ ಕಾರ್ಯಾಲಯಗಳಲ್ಲಿ ಕಾರ್ಯನಿರತರಾಗಿರುವ ಸುಮಾರು ಎಂಬತ್ತು ಸಿಬ್ಬಂದಿಗಳಿಗೆ ಕೋವಿಡ್ ತಗಲಿದ್ದು ಸಹ ಇನ್ನೊಂದು ಆತಂಕದ ಸುದ್ದಿ. ದೆಹಲಿಯ ರಾಜ್ಯದ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾರವರಿಗೆ ಕೋವಿಡ್ ಮತ್ತು ಡೆಂಗು ಎರಡೂ ಒಂದೇ ಬಾರಿ ಆಗಿರುವುದು ಎಣೆಯಿಲ್ಲದ ಆತಂಕಕ್ಕೆ ಎಡೆ ಮಾಡಿಕೊಡುತ್ತಿದೆ. ಅತ್ತ ದಕ್ಷಿಣದಲ್ಲಿ ಖ್ಯಾತ ಹಿನ್ನಲೆ ಗಾಯಕರಾದ ಎಸ್.ಪಿ. ಬಾಲಸುಬ್ರಮಣ್ಯನವರು ಇನ್ನೇನು ಗುಣಮುಖರಾದರೆಂಬ ಸುದ್ದಿ ಬರುತ್ತಿರುವ ಹಿನ್ನೆಲೆಯಲ್ಲೇ ಮತ್ತೆ ಮರಳಿ ತೀರಾ ತೀವ್ರ ಅನಾರೋಗ್ಯದ ಸ್ಥಿತಿಗೆ ತಲುಪಿ ಇದೀಗ ತಾನೆ ಬಂದ ಸುದ್ದಿಯಂತೆ ಇಹಲೋಕ ತ್ಯಜಿಸಿದ್ದಾರೆ.

ಹಾಗೆ ನೋಡಿದರೆ, ಹಲವಾರು ದೆಹಲಿಯ ಕನ್ನಡಿಗರು ಕೋವಿಡ್‌ನಿಂದ ಗುಣಮುಖರಾಗಿ ಬಂದದ್ದು ಒಂದು ಬಗೆಯಲ್ಲಿ ಸಮಾಧಾನದ ಸಂಗತಿ. ಹಾಗೆ ಗುಣಮುಖರಾಗಿ ಬಂದರೂ ಕೋವಿಡ್‌ನಿಂದ ದೇಹದ ಮೇಲೆ ಆಗುವ ಪರಿಣಾಮಗಳ ಕುರಿತಾಗಿ ಇನ್ನೂ ಸಂಶೋಧನೆಗಳು ನಡೆಯುತ್ತಿವೆ. ಗುಣಮುಖರಾದ ನಂತರದಲ್ಲಿ ಉಂಟಾಗುವ ಆರೋಗ್ಯದ ಏರುಪೇರುಗಳಿಂದಾಗಿ ಹಲವರು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಸಹಜ ರೀತಿಯಲ್ಲಿ ಕೆಲಸ ಮಾಡುವುದೇ ಅಸಾಧ್ಯವಾಗಿ ಬಿಟ್ಟಿದೆ.

ದೆಹಲಿಯಲ್ಲಿ ದಿನನಿತ್ಯದ ಜೀವನ ತನ್ನ ಮೊದಲಿನ ಸ್ಥಿತಿಗೆ ಮರಳಲು ಇನ್ನೂ ಕೆಲಕಾಲ ಬೇಕಾಗಬಹುದೆಂದು ತೋರುತ್ತದೆ. ದೆಹಲಿಯ ಮತ್ತು ಅದರ ಎನ್.ಸಿ.ಆರ್. ನ ವಿಸ್ತ್ರತ ಮೆಟ್ರೊ ಸೇವೆ ಈಗ ತನ್ನ ಸಹಜ ವೇಳಾಪಟ್ಟಿಗೆ ಮರಳಿ ಸುಮಾರು ನಾಲ್ಕು ಲಕ್ಷ ಜನ ದಿನಂಪ್ರತಿ ಅದರ ಮೂಲಕ ಪ್ರಯಾಣಿಸುತ್ತಿದ್ದಾರೆ. ಆದರೆ, ಇದು ಸುಮಾರು ಹದಿನೈದು ಲಕ್ಷಕ್ಕೂ ಮೀರಿ ಪ್ರಯಾಣಿಸುತ್ತಿದ್ದವರ ಸಂಖ್ಯೆಗಿಂತ ತುಂಬ ಕಡಿಮೆಯೆನ್ನುವುದನ್ನು ನಾವು ಗಮನಿಸಬೇಕು. ದೆಹಲಿಯ ಬಸ್ಸುಗಳಲ್ಲೂ ಸಹ ಇದೇ ಬಗೆಯ ನಿಗದಿತ ಪ್ರಯಾಣಿಕರ ಸಂಖ್ಯೆಯಿಂದಾಗಿ ಮೊದಲು ಒಂದು ಗಂಟೆ ತೆಗೆದುಕೊಳ್ಳುತ್ತಿದ್ದ ಬಸ್ಸಿನ ಪಯಣ ಈಗ ಮೂರು ಗಂಟೆಗಳಾಗೂ ಮೀರಿದೆ.

ದೆಹಲಿ ವಿಶ್ವವಿದ್ಯಾಲಯ ಮತ್ತು ಇತರ ಪ್ರಮುಖ ಶೈಕ್ಷಣಿಕ ಸಂಸ್ಥೆಗಳು (ಜೆ.ಎನ್.ಯು, ಐಐಟಿ ಮತ್ತು ಇತ್ಯಾದಿ) ಇನ್ನೂ ತಮ್ಮ ಬಾಗಿಲುಗಳನ್ನು ಹೊಸ ವರುಷಕ್ಕೆ ತೆಗೆಯಲು ಸನ್ನದ್ದರಾಗುತ್ತಿದ್ದಾರೆ. ಆದರೆ, ಈಗ ಏರುತ್ತಿರುವ ಕೋವಿಡ್‌ನ ಸಂಖ್ಯೆಯಿಂದಾಗಿ ಇದು ಎಷ್ಟರ ಮಟ್ಟಿಗೆ ಯಶಸ್ಸು ಪಡೆಯುವುದೆಂಬುದು ಇನ್ನೂ ಊಹಾಪೋಹದ ಪರಿಧಿಯಲ್ಲೇ ಇದೆ. ನವೆಂಬರ ತಿಂಗಳಿನಿಂದ ಆನ್‌ಲೈನ್ ಮೂಲಕ ವಿಶ್ವವಿದ್ಯಾಲಯಗಳ ನೂತನ ಶೈಕ್ಷಣಿಕ ವರುಷವನ್ನು ಪ್ರಾರಂಭಿಸುವುದಕ್ಕೆ ಯುಜಿಸಿ ಯೋಜನೆ ಹಾಕುತ್ತಿರುವ ಕುರಿತಾಗಿ ಸುದ್ದಿಗಳು ಬರುತ್ತಿವೆ. ದೆಹಲಿಯ ಶಾಲೆಗಳನ್ನು ಮೇಲಿನ ತರಗತಿಗಳಿಗೆ (9 ರಿಂದ 12 ರವರೆಗೆ) ಅಕ್ಟೋಬರ 5 ಪ್ರಾರಂಭಿಸಬೇಕೆಂಬುದು ದೆಹಲಿ ಸರಕಾರದ ಇಚ್ಛೆ. ಆದರೆ, ಇವೆಲ್ಲ ಕೋವಿಡ್ ಹರಡುವ ಗತಿಗಳ ಮೇಲೆ ಅವಲಂಬಿತವಾಗಿದೆಯೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ.

ಕೋವಿಡ್‌ನ್ನು ಓಡಿಸಲು ಮುಖವಸ್ತ್ರವನ್ನು ಧರಿಸುವುದರ ಜೊತೆಗೆ ಎಲ್ಲರೊಂದಿಗೆ ಎರಡು ಮಾರು ದೂರವಿರುವ ಅಭ್ಯಾಸವನ್ನು ರೂಢಿ ಮಾಡಿಕೊಳ್ಳಿ ಎಂದು ಪ್ರಧಾನ ಮಂತ್ರಿಗಳಿಂದಾದಿಯಾಗಿ ಎಲ್ಲರೂ ಹೇಳುತ್ತಿದ್ದಾರೆ. ಆದರೆ, ಇದೆಲ್ಲವನ್ನೂ ಸಾರಿಸಾರಿ ಹೇಳುವವರೇ ಈ ಮುಂಜಾಗರೂತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಬೇಕಾದ ಸ್ಥಿತಿಯನ್ನು ನಿರ್ಮಾಣ ಮಾಡಬೇಕಿದೆ. ಪಂಜಾಬು, ಹರಿಯಾಣಗಳಲ್ಲಿ ರೈತರು ನಿತ್ಯವೂ ತಮ್ಮ ಬೇಸಾಯದ ಕುರಿತಾದ ಕಾನೂನುಗಳ ಬೇಡಿಕೆಗಳ ಪೂರೈಕೆಗಾಗಿ ಮುಷ್ಕರ ಹೂಡುತ್ತಿದ್ದಾರೆ. ಪಂಜಾಬು ಮತ್ತು ಹರಿಯಾಣಗಳ ಕಡೆಯಿಂದ ಪೈರಿನ ಬುಡಗಳನ್ನು ಮತ್ತು ಕೊಳೆಗಳನ್ನು ತಮ್ಮ ಹೊಲಗಳಲ್ಲೇ ಸುಡುವ ಪ್ರಕ್ರಿಯೆ ಪ್ರಾರಂಭವಾಗಿರುವುದು ಈಗಾಗಲೇ ದೆಹಲಿ ಮತ್ತು ಇತರ ಉತ್ತರದ ರಾಜ್ಯಗಳ ಹವಾಮಾನದ ಗುಣಮಟ್ಟದ ಮೇಲೆ ಪ್ರಭಾವ ಬೀರಲು ಪ್ರಾರಂಭಿಸಿದೆ. ಈ ಬಗೆಯ ಕೆಟ್ಟ ಹವಾಮಾನದ ಕಾರಣದಿಂದಾಗಿ ಕೋವಿಡ್‌ನಿಂದ ತೊಂದರೆಗೊಳಗಾಗುವವರ ಸಂಖ್ಯೆಯೂ ಏರುವುದರ ಬಗ್ಗೆ ಈಗಾಗಲೇ ಆತಂಕದ ಅಲೆಗಳು ಏಳಲು ಪ್ರಾರಂಭವಾಗಿವೆ.

ಹೀಗಾಗಿ ಈ ಎಲ್ಲ ತಿಂಗಳುಗಳು ಮತ್ತೆ ಮುಂಬರುವ ತಿಂಗಳುಗಳು ನಮಗೆಲ್ಲ ಎಣೆಯಿಲ್ಲದ ಆತಂಕದ ತಿಂಗಳುಗಳು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಇತ್ತ ನಮ್ಮನ್ನೆಲ್ಲ ಕಚುಗುಳಿಯಿಡಲೆಂದು ಬರುತ್ತಿರುವ ಚಳಿಯ ಮಂದಮಾರುತದಲ್ಲಿ ಏನೆಲ್ಲ ಇರಬಹುದೆಂಬುದರ ಬಗ್ಗೆ ನಾವೆಲ್ಲ ಮತ್ತೆ ಎಚ್ಚರದಿಂದ ಇರಬೇಕಾದ ಅನಿವಾರ್ಯತೆಗಳು ಸೃಷ್ಟಿಯಾಗುತ್ತಿವೆ. ಇದಕ್ಕೆಲ್ಲ ನಾವು-ನೀವು ಎಲ್ಲಿಂದ ಕಾರಣಗಳನ್ನು ಹುಡುಕೋಣ? ಡಿವಿಜಿಯವರ ಸರಳವಾದ ಮತ್ತು ಜನಜನಿತವಾದ ಸಾಲುಗಳಲ್ಲಿ...ಬದುಕು ಜಟಕಾಬಂಡಿ, ವಿಧಿ ಅದರ ಸಾಹೇಬ...ಮುಂದಿನದನ್ನು ನೀವೇ ಓದಿಕೊಳ್ಳಿ.

*ಡಾ. ವೆಂಕಟಾಚಲ ಹೆಗಡೆ*
*ಅಧ್ಯಕ್ಷರು*

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ,

ದೆಹಲಿ ಕರ್ನಾಟಕ ಸಂಘದಲ್ಲಿ ಸತತವಾಗಿ ನಡೆಯುತ್ತಿದ್ದ ಸಾಂಸ್ಕೃತಿಕ, ಸಾಹಿತ್ಯಿಕ ಕಾರ್ಯಕ್ರಮಗಳು ಮಾರಕ ರೋಗ ಕಾರಣದಿಂದ ನಿಶ್ಯಬ್ದವಾಗಿವೆ. ಈ ಸಮಯದಲ್ಲಿ ಮಾನ್ಯ ಕೇಂದ್ರ ಸಚಿವ ಸುರೇಶ್ ಅಂಗಡಿಯವರು, ರಾಜ್ಯಸಭಾ ಸದಸ್ಯ ಅಶೋಕ್ ಗಸ್ತಿ, ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ದೇವರಾಜ್ ಈ ಮಾರಕ ರೋಗದಿಂದ ನಿಧನರಾಗಿದ್ದಾರೆ. ದೆಹಲಿ ಕರ್ನಾಟಕ ಸಂಘ ಮತ್ತು ಕನ್ನಡ ಶಾಲೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ವಿಶೇಷತೆಯನ್ನು ತೋರುತ್ತಿದ್ದ ನಮ್ಮ ಆತ್ಮೀಯರು ಮತ್ತು ಇಂದು ನಾನು ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಲು ನನಗೆ ಉತ್ತೇಜನ ತುಂಬಿ ಕೆಲಸ ಕಾರ್ಯಗಳಿಗೆ ಸಾಥು ನೀಡುತ್ತಿದ್ದ ಜಿ.ಬಿ. ಹೆಗಡೆಯವರು ನಿಧನರಾಗಿರುವುದು ತುಂಬಾ ಆತಂಕದ ವಿಷಯ. ಕನ್ನಡ ಶಾಲೆಯಲ್ಲಿ ಪ್ರಾಂಶುಪಾಲರಾಗಿ ಎಂ.ಸಿ.ಎ. ಯನ್ನು ಖುದ್ದಾಗಿ ಪ್ರಾರಂಭಿಸಿ ಆ ದಿನಗಳಲ್ಲಿ ಶಾಲೆಗೆ ಲಾಭವನ್ನು ತಂದ ವ್ಯಕ್ತಿ ಶ್ರೀ ಜಿ.ಬಿ. ಹೆಗಡಿಯವರು. ಇವರೆಲ್ಲರ ಆತ್ಮಕ್ಕೆ ಸದ್ಗತಿ ಸಿಗಲಿ ಎಂದು ಕೋರುತ್ತೇನೆ.

ಬರುವ ನವೆಂಬರ್ ತಿಂಗಳಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಯೋಜನೆ ಮಾಡಬೇಕಾಗಿದೆ. ಕೇಂದ್ರ ಸರ್ಕಾರದ ನಿಯಮಾವಳಿಗಳ ಪ್ರಕಾರ ನಾವು ಯಾವ ರೀತಿ ಕಾರ್ಯಕ್ರಮವನ್ನು ಆಯೋಜಿಸಬಹುದು ಎಂದು ಸಮಿತಿಯಲ್ಲಿ ಈಗಾಗಲೇ ಚರ್ಚಿಸಿದ್ದೇವೆ.ತಮ್ಮ ಸಲಹೆಗಳನ್ನು ಸಹ ನನಗೆ ದಯವಿಟ್ಟು ನೀಡಿ. ಆದಷ್ಟು ಬೇಗನೆ ಈ ಮಾರಕ ರೋಗ ಮುಕ್ತವಾಗಿ ಜನರಿಗೆ ಶಾಂತಿ ನೆಮ್ಮದಿ ಸಿಗಲಿ.



ಜಿ.ಬಿ. ಹೆಗಡಿ ಅವರೊಂದಿಗೆ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜು

ಸಹಸ್ರಾರು ಜನರಿಗೆ ಕೆಲಸ ಕಾರ್ಯಗಳು ಇಲ್ಲದಂತಾಗಿದೆ. ಆ ಎಲ್ಲ ಕೆಲಸ ಕಾರ್ಯಗಳು ಮತ್ತೆ ತಿರುಗಿ ಬರಲಿ. ನೊಂದವರ ಬಾಳಲ್ಲಿ ಶಾಂತಿ ನೆಮ್ಮದಿ ಸಿಗಲಿ. ಆತ್ಮೀಯರೇ ಇನ್ನು ಕೆಲವು ದಿನಗಳು ದಯವಿಟ್ಟು ಅವಶ್ಯಕತೆ ಇದ್ದಷ್ಟು ಮಾತ್ರ ಹೊರಗಡೆ ಬನ್ನಿ. ಜೊತೆಗೆ ಮಾಸ್ಕ್ ಮತ್ತು ಸ್ಯಾನಿಟೈಸರ್ ಕಡ್ಡಾಯವಾಗಿ ಬಳಸಿ. ಹಿರಿಯರನ್ನು ಮಕ್ಕಳನ್ನು ಜಾಗೃತೆಯಿಂದ ನೋಡಿಕೊಳ್ಳಿ. ಈ ಮಾರಕ ರೋಗ ದಸರಾ ಹೊತ್ತಿಗೆ ಮುಕ್ತಯವಾಗಲಿ.ಮಹಾತಾಯಿ ಚಾಮುಂಡೇಶ್ವರಿಯ ಆಶೀರ್ವಾದ ಎಲ್ಲರ ಮೇಲೂ ಇರಲಿ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

# ಡಾ. ಚಂದ್ರಶೇಖರ ಪಾಟೀಲ ಅವರಿಗೆ ಸಂಘದ ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಪ್ರದಾನ

ಕನ್ನಡದ ಹಿರಿಯ ಸಾಹಿತಿ, ಕನ್ನಡಪರ ಹೋರಾಟಗಾರ ಡಾ. ಚಂದ್ರಶೇಖರ ಪಾಟೀಲ ಅವರಿಗೆ ದೆಹಲಿ ಕರ್ನಾಟಕ ಸಂಘದ 2017ನೇ ಸಾಲಿನ 'ಡಾ. ಸರೋಜಿನಿ ಮಹಿಷಿ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಅನುಪಮ ಸೇವೆಗಾಗಿ ಈ ಪ್ರಶಸ್ತಿಯನ್ನು ನೀಡಲಾಗಿದೆ.

ಕನ್ನಡ ಸಾರಸ್ವತ ಲೋಕದಲ್ಲಿ 'ಚಂಪಾ' ಎಂದೇ ಖ್ಯಾತರಾಗಿರುವ ಚಂದ್ರಶೇಖರ ಪಾಟೀಲರಿಗೆ ದಿನಾಂಕ 29.08.2020 ರಂದು ಬೆಂಗಳೂರಿನ ಅವರ ನಿವಾಸದಲ್ಲಿ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಕಾರ್ಯಕಾರಿ ಸಮಿತಿ ಸದಸ್ಯ ಶಿವಾನಂದ ಇಂಗಳೇಶ್ವರ ಅವರು ಸಂಘದ ಪರವಾಗಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು. ಈ ಸಂದರ್ಭದಲ್ಲಿ ಸಂಘದ ಆಜೀವ ಸದಸ್ಯ ಟಿ.ಎಸ್. ರಮೇಶ್ ಉಪಸ್ಥಿತರಿದ್ದರು.

ಡಾ. ಚಂದ್ರಶೇಖರ ಪಾಟೀಲರಿಗೆ ಶಾಲು ಹೊದಿಸಿ, ಫಲಪುಷ್ಪಗಳನ್ನು ನೀಡಿ ಪ್ರಶಸ್ತಿ ಫಲಕಗಳೊಂದಿಗೆ ಸನ್ಮಾನಿಸಲಾಯಿತು. ಪ್ರಶಸ್ತಿಯೊಂದಿಗೆ ನೀಡುವ ರೂಪಾಯಿ 50,000/- ನಗದು ಬಹುಮಾನವನ್ನು ನೀಡಲಾಯಿತು.





ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಕಾರ್ಯಕಾರಿ ಸಮಿತಿಯ ಸದಸ್ಯ ಶಿವಾನಂದ ಇಂಗಳೇಶ್ವರ ಹಾಗೂ ಸಂಘದ ಆಜೀವ ಸದಸ್ಯ ಟಿ.ಎಸ್. ರಮೇಶ್ ಅವರು ಸಂಘದ ಪರವಾಗಿ ಹಿರಿಯ ಸಾಹಿತಿ ಡಾ. ಚಂದ್ರಶೇಖರ ಪಾಟೀಲ ಅವರಿಗೆ 2017ನೇ ಸಾಲಿನ ಸಂಘದ ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಪ್ರದಾನ ಮಾಡಿದರು.

2017ನೇ ಸಾಲಿನ ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಸಮಾರಂಭವನ್ನು 2018ರ ಡಿಸೆಂಬರ್ 16ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಆಯೋಜಿಸಲಾಗಿತ್ತು. ಕಾರಣಾಂತರಗಳಿಂದ ಹಿರಿಯ ಸಾಹಿತಿ ಡಾ. ಚಂದ್ರಶೇಖರ ಪಾಟೀಲರು ಅಂದು ಭಾಗವಹಿಸಲು ಸಾಧ್ಯವಾಗಲಿಲ್ಲ. ಈ ಕಾರಣದಿಂದ ಪ್ರಶಸ್ತಿಯನ್ನು ಅವರ ನಿವಾಸದಲ್ಲಿ ಇದೀಗ ಪ್ರದಾನ ಮಾಡಲಾಯಿತು.

ಸಾಹಿತಿ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಹಾಗೂ ಹಿರಿಯ ಸಾಹಿತಿ ಮತ್ತು ರಾಜ್ಯಸಭಾ ಸದಸ್ಯ ಡಾ. ಎಲ್. ಹನುಮಂತಯ್ಯ ಅವರನ್ನೊಳಗೊಂಡ ಆಯ್ಕೆ ಸಮಿತಿ ಇವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿತ್ತು.

*ಎಸ್. ಕುಮಾರ್*

# ಮಕ್ಕಳಿಂದ ಕನ್ನಡ ಕವಿಗಳ ಕವನ ವಾಚನ

ದೆಹಲಿ ಕರ್ನಾಟಕ ಸಂಘವು ಹಲವಾರು ವರ್ಷಗಳಿಂದ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುತ್ತಾ ಬಂದಿದೆ. ಕಳೆದ ಸುಮಾರು 4–5 ತಿಂಗಳುಗಳಿಂದ ಕೋವಿಡ್ 19ರ ಕಾರಣದಿಂದ ಯಾವುದೇ ಕಾರ್ಯಕ್ರಮ ನಡೆಸಲು ಸಾಧ್ಯವಾಗಿರಲಿಲ್ಲ. ಈ ಕೊರತೆಯನ್ನು ಈ ಬಾರಿಯ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದ ಮೂಲಕ ನೀಗಿಸಲಾಯಿತು.

74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಸಂಘದಲ್ಲಿ ದಿನಾಂಕ 15.08.2020ರಂದು ವಿಶಿಷ್ಟವಾಗಿ ಆಚರಿಸಲಾಯಿತು. ಅಂದು 'ಕನ್ನಡದ ಕವಿಗಳ ಕವನ ವಾಚನ' ಆಯೋಜಿಸಲಾಗಿತ್ತು.


ಈ ಕಾರ್ಯಕ್ರಮವನ್ನು ಜಾಲತಾಣದಲ್ಲಿ ಸಿಸ್ಕೋ ವೆಬೆಕ್ಸ್ ಮೂಲಕ ಆ್ಯಪ್ ಮೂಲಕ ಆಯೋಜಿಸಲಾಗಿತ್ತು. ಮಕ್ಕಳಿಗಾಗಿ ಆಯೋಜಿಸಿದ ಈ ಕಾರ್ಯಕ್ರಮದಲ್ಲಿ 4ರಿಂದ 18ವರ್ಷ ವಯಸ್ಸಿನ ಇಪ್ಪತ್ತೆರಡು ಮಕ್ಕಳು ಭಾಗವಹಿಸಿದ್ದರು. ತಾಯ್ನಾಡಿನಿಂದ ದೂರವಿರುವ ಕನ್ನಡದ ಮಕ್ಕಳಿಗೆ ಕನ್ನಡ ಸಾಹಿತ್ಯದ ಬಗ್ಗೆ ಅರಿವು ಮೂಡಿಸಿ, ಅವರಲ್ಲಿ ಕನ್ನಡ ಪ್ರೇಮವನ್ನು ಬೆಳೆಸುವುದೇ ಕಾರ್ಯಕ್ರಮದ ಉದ್ದೇಶವಾಗಿತ್ತು.

ಮುಖ್ಯ ಅತಿಥಿಗಳಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಹಾಗೂ ಖ್ಯಾತ ಕವಿ ಸಿದ್ದಲಿಂಗಯ್ಯ ಅವರು ಆಗಮಿಸಿದ್ದರು. ದೆಹಲಿ ಮಕ್ಕಳ ಕನ್ನಡ ಪ್ರೇಮವನ್ನು ಇಬ್ಬರೂ ಅತಿಥಿಗಳೂ ತುಂಬು ಹೃದಯದಿಂದ ಶ್ಲಾಘಿಸಿದರು.


ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಎಚ್.ಎಸ್. ವೆಂಕಟೇಶ್ ಮೂರ್ತಿಯವರ ಒಂದು ಕವನವನ್ನು ಓದುವುದರ ಮೂಲಕ ಕಾರ್ಯಕ್ರಮಕ್ಕೆ ವಿಧ್ಯುಕ್ತವಾದ ಚಾಲನೆಯನ್ನು ನೀಡಿದರು.




ಟಿ.ಎಸ್. ನಾಗಾಭರಣ



ಸಿದ್ದಲಿಂಗಯ್ಯ




ಅಧೋಕ್ಷಜ ವೆಂಕಟೇಶ್




ಅವನಿ ನೆಲ್ಲಿ




ಸೃಷ್ಟಿ ಪೂಜಾರಿ




ಧನ್ವಿನ್



ಸೃಜನ ಬಿ. ಹಿರೇಮಠ




ಓಂಕಾರೇಶ್ವರ ಸಿ




ಅಭಿಷೇಕ್ ಎಸ್.




ಲಕ್ಷ್ಯ ಎನ್.




ಎಂ. ಭುವನ್ ಸೂರಜ್



ಸುಮಂತ್



ಸಿ.ಬಿ. ನಿಟಿಲಾಕ್ಷ್




ಸಿ.ಬಿ. ವೈಷ್ಣವಿ




ಅನನ್ಯ ಎನ್.




ನವಯುಗ್ ಶ್ರೀರಾಮ್



ಕ್ಷಿತಿಜ್ ಶ್ರೀರಾಮ್




ಪ್ರಥಮ್ ಮಹಾದೇವ್ ಕರ್ಜಗಿ




ರಿದ್ಯಾಂಶ್ ಮಹಾದೇವ್ ಕರ್ಜಗಿ




ಋತ್ವಿಕ್ ನೆಲ್ಲಿ




ಸೌರಭ್ ಕುರ್ಮೋಲಿ



ಸೌಮ್ಯಶ್ರೀ



ಶ್ರುತಿ ಪ್ರಭಾಕರ್



ಮಾಣಿಕೇಶ್ವರಿ ಬಿ. ಹಿರೇಮಠ

ಅಧೋಕ್ಷಜ ವೆಂಕಟೇಶ್, ಅವನಿ ನೆಲ್ಲಿ, ಸೃಷ್ಟಿ ಪೂಜಾರಿ, ಧನ್ವಿನ್, ಸೃಜನ ಬಿ. ಹಿರೇಮಠ, ಓಂಕಾರೇಶ್ವರ ಸಿ., ಅಭಿಷೇಕ್ ಎಸ್., ಲಕ್ಷ್ಯ ಎನ್., ಎಂ. ಭುವನ್ ಸೂರಜ್, ಸುಮಂತ್, ಸಿ.ಬಿ. ನಿಟಿಲಾಕ್ಷ್, ಸಿ.ಬಿ. ವೈಷ್ಣವಿ, ಅನನ್ಯ ಎನ್., ನವಯುಗ್ ಶ್ರೀರಾಮ್, ಕ್ಷಿತಿಜ್ ಶ್ರೀರಾಮ್, ಪ್ರಥಮ್ ಮಹಾದೇವ್ ಕರ್ಜಗಿ, ರಿದ್ಯಾಂಶ್ ಮಹಾದೇವ್ ಕರ್ಜಗಿ, ಋತ್ವಿಕ್ ನೆಲ್ಲಿ, ಸೌರಭ್ ಕುರ್ಮೋಲಿ, ಸೌಮ್ಯಶ್ರೀ, ಶ್ರುತಿ ಪ್ರಭಾಕರ್, ಮಾಣಿಕೇಶ್ವರಿ ಬಿ. ಹಿರೇಮಠ ಭಾಗವಹಿಸಿದರು.

ಕಾರ್ಯಕ್ರಮವದ ರೂಪುರೇಷೆಯನ್ನು ಸಿದ್ಧಪಡಿಸಿದ ಸಂಘದ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ ಎನ್.ಪಿ. ಚಂದ್ರಶೇಖರ ಅವರು ಕವಿ ಸಿದ್ದಲಿಂಗಯ್ಯ ಅವರ ಒಂದು ಕವನವನ್ನು ವಾಚಿಸಿದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಪೂಜಾ ರಾವ್ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

***ಪೂಜಾ ರಾವ್***

# ಡಾ. ಬಿ.ಟಿ. ಚಿದಾನಂದ ಮೂರ್ತಿ ಅವರಿಗೆ 'ಶ್ರೇಷ್ಠ ಶಿಕ್ಷಕ' ಪುರಸ್ಕಾರ



ಪ್ರೊ. ಡಾ. ಬಿ.ಟಿ. ಚಿದಾನಂದ ಮೂರ್ತಿಯವರಿಗೆ ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ 'ಶ್ರೇಷ್ಠ ಶಿಕ್ಷಕ' ಪುರಸ್ಕಾರ ನೀಡಿ ಗೌರವಿಸಿದೆ. ಡಾ. ಚಿದಾನಂದ ಮೂರ್ತಿ ಅವರು 44 ವರ್ಷಗಳಿಂದ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕ್ಷೇತ್ರದಲ್ಲಿ ನೀಡಿದ ಅವಿರತ ಸೇವೆಗಾಗಿ ಈ ಗೌರವ ನೀಡಲಾಗಿದೆ. ದಿನಾಂಕ 10.09.2020ರಂದು ನಡೆದ ಶಿಕ್ಷಕರ ದಿನಾಚರಣೆ ಸಂದರ್ಭದಲ್ಲಿ ರಾಜ್ಯ ವೈದ್ಯಕೀಯ ಶಿಕ್ಷಣ ಸಚಿವ ಸನ್ಮಾನ್ಯ ಡಾ. ಕೆ. ಸುಧಾಕರ್, ಉಪಕುಲಪತಿ ಡಾ. ಎಸ್. ಸಚ್ಚಿದಾನಂದ, ಬೆಂಗಳೂರಿನ ಪಿ.ಇ.ಎಸ್. ವಿಶ್ವವಿದ್ಯಾನಿಲಯದ ಕುಲಾಧಿಪತಿ ಡಾ. ದೊರೆಸ್ವಾಮಿ, ಕುಲಸಚಿವ ಡಾ. ರಾಮಕೃಷ್ಣ ರೆಡ್ಡಿ ಇವರು ಈ ಪುರಸ್ಕಾರವನ್ನು ನೀಡಿ ಸನ್ಮಾನಿಸಿದ್ದಾರೆ.

## ಅಜಯ್‌ಕುಮಾರ್ ನಾಯಕ್ ಅವರಿಗೆ ಬೀಳ್ಕೊಡುಗೆ



ದೆಹಲಿ ಕರ್ನಾಟಕ ಸಂಘದಲ್ಲಿ ಸುದೀರ್ಘ ಕಾಲ ಸಿಬ್ಬಂದಿಯಾಗಿ ಸೇವೆ ಸಲ್ಲಿಸಿ ವೃತ್ತಿಯನ್ನು ತೊರೆದು ತಾಯ್ನಾಡಿಗೆ ತೆರಳಿದ ಅಜಯ್‌ಕುಮಾರ್ ನಾಯಕ್ ಅವರಿಗೆ ಆತ್ಮೀಯವಾಗಿ ಬೀಳ್ಕೊಡಲಾಯಿತು. ದಿನಾಂಕ 15.08.2020ರಂದು ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ಅಜಯ್‌ಕುಮಾರ್ ಅವರ ಪ್ರಮಾಣಿಕ ಸೇವೆಯನ್ನು ಸ್ಮರಿಸಿಕೊಂಡು ಅವರಿಗೆ ಶಾಲು ಹೊದಿಸಿ ಗೌರವಿಸಿದರು. ಹಿರಿಯ ವ್ಯವಸ್ಥಾಪಕರಾದ ಬಾಲಚಂದ್ರ ಬಿ.ಎಸ್, ಶೇಖರ, ದೇವಯ್ಯ ಎಂ.ಇ. ಮತ್ತಿತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.


## ಅಭಿನಂದನೆ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀಕಾಂತ್ ಗೋವಿಂದ ಪೈ ಮತ್ತು ಪೂರ್ಣಿಮಾ ಶ್ರೀಕಾಂತ್ ಪೈ ಅವರ ಪುತ್ರಿ ಕು. ಪ್ರಗ್ಯಾ ಶ್ರೀಕಾಂತ್ ಪೈ ಈ ಬಾರಿ ಸಿ.ಬಿ.ಎಸ್.ಇ. ನಡೆಸಿದ 10ನೇ ತರಗತಿಯಲ್ಲಿ ಶೇಕಡಾ 95.4 ಅಂಕಗಳೊಂದಿಗೆ ಉತ್ತೀರ್ಣಳಾಗಿದ್ದಾಳೆ.

ಪ್ರತಿಭಾವಂತ ವಿದ್ಯಾರ್ಥಿನಿ ಕು. ಪ್ರಗ್ಯಾಳಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.

# ಡಾ. ಪುರುಷೋತ್ತಮ ಬಿಳಿಮಲೆ ಸೇವೆಯಿಂದ ನಿವೃತ್ತಿ




ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಪ್ರಥಮ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ ಸಾಹಿತಿ, ಜಾನಪದ ತಜ್ಞ ಡಾ. ಪುರುಷೋತ್ತಮ ಬಿಳಿಮಲೆ ಕಳೆದ ಅಗಸ್ಟ್ ತಿಂಗಳಲ್ಲಿ ನಿವೃತ್ತರಾಗಿದ್ದಾರೆ.

ಕರ್ನಾಟಕ ಸರಕಾರದ ಸಹಾಯದೊಂದಿಗೆ ಜೆ.ಎನ್.ಯು. ನಲ್ಲಿ ಕನ್ನಡ ಅಧ್ಯಯನ ಪೀಠವು 2015 ಜುಲಾಯಿ ತಿಂಗಳಿನಲ್ಲಿ ಸ್ಥಾಪನೆಗೊಂಡಿತು. ಅರ್ಥಪೂರ್ಣ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳಿಂದ ಪೀಠಕ್ಕೆ ಭದ್ರ ಬುನಾದಿಯನ್ನು ಹಾಕಿಕೊಟ್ಟ ಡಾ. ಬಿಳಿಮಲೆ ಅವರ ಕಾರ್ಯ ಅಪಾರ ಮೆಚ್ಚುಗೆಯನ್ನು ಪಡೆದಿದೆ.

ವಿಶ್ರಾಂತ ಬದುಕಿಗೆ ಮರಳಿರುವ ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರೂ ಆಗಿರುವ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು ಮತ್ತು ಶುಭಾಶಯಗಳು.

# ಜೆ.ಎನ್.ಯು. ಕನ್ನಡ ಪೀಠದ ನೂತನ ಪ್ರಾಧ್ಯಾಪಕರಾಗಿ ಡಾ. ವಿಶ್ವನಾಥ್



ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ನೂತನ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾಗಿ ಡಾ. ವಿಶ್ವನಾಥ್ ನೇಮಕಗೊಂಡಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜಿನ ಕನ್ನಡ ವಿಭಾಗದ ಪ್ರಾಧ್ಯಾಪಕರಾಗಿ ಅವರು ಸೇವೆ ಸಲ್ಲಿಸುತ್ತಿದ್ದರು. ಕರ್ನಾಟಕದಲ್ಲಿ ಸ್ಥಳನಾಮಗಳ ಕುರಿತು ಅವರು ವಿಶೇಷ ಅಧ್ಯಯನ ನಡೆಸಿ ಹಲವಾರು ಕೃತಿಗಳನ್ನು ಪ್ರಕಟಿಸಿದ್ದಾರೆ.

ಕನ್ನಡ ಎಂ.ಎ.ಯಲ್ಲಿ ಚಿನ್ನದ ಪದಕದೊಂದಿಗೆ ಉತ್ತೀರ್ಣರಾಗಿರುವ ಡಾ. ವಿಶ್ವನಾಥ್ ಅವರು ಮೈಸೂರು ವಿಶ್ವವಿದ್ಯಾಲಯದ ಉಪ ಕುಲಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ನೂತನ ಪ್ರಾಧ್ಯಾಪಕರಾಗಿ ನೇಮಕಗೊಂಡಿರುವ ಡಾ. ವಿಶ್ವನಾಥ್ ಅವರಿಗೆ ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು ಮತ್ತು ಶುಭಾಶಯಗಳು.

# ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಐದು ವರ್ಷಗಳ ಸಂಕ್ಷಿಪ್ತ ವರದಿ (2015-20)

*ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಪ್ರಥಮ ಪ್ರಾಧ್ಯಾಪಕರಾಗಿ ಮತ್ತು ಮುಖ್ಯಸ್ಥರಾಗಿ ಡಾ. ಪುರುಷೋತ್ತಮ ಬಿಳಿಮಲೆ ಅವರು ಸೇವೆ ಸಲ್ಲಿಸಿ ಕಳೆದ ಅಗಸ್ಟ್ ತಿಂಗಳು ನಿವೃತ್ತಿಯಾಗಿದ್ದಾರೆ. ಈ ಸಂದರ್ಭದಲ್ಲಿ ಅವರು* **'ಅಭಿಮತ'** *ಪ್ರಕಟಣೆಗಾಗಿ ಕನ್ನಡ ಅಧ್ಯಯನ ಪೀಠದ ಕಳೆದ ಐದು ವರ್ಷಗಳ ಚಟುವಟಿಕೆಗಳ ವರದಿಯನ್ನು ನೀಡಿದ್ದಾರೆ. ಅವರಿಗೆ ನಮ್ಮ ಹಾರ್ದಿಕ ಕೃತಜ್ಞತೆಗಳು.*

**–ಸಂಪಾದಕ**

ಜೆ.ಎನ್.ಯು. ಕನ್ನಡ ಪೀಠವು ಕರ್ನಾಟಕದ ಜನರ ತೆರಿಗೆ ಹಣದಿಂದ ನಡೆಯುತ್ತಿದೆ. ಹಾಗಾಗಿ ಅಲ್ಲಿ ಕಳೆದ ಐದು ವರ್ಷಗಳಿಂದ ಏನು ನಡೆದಿದೆ ಎಂಬುದನ್ನು ಜನರಿಗೆ ತಿಳಿಸಬೇಕಾದ್ದು ನನ್ನ ಕರ್ತವ್ಯ. ಈ ಕಾರಣದಿಂದ ಪೀಠದ ಸಂಕ್ಷಿಪ್ತ ವರದಿಯನ್ನು ಅಭಿಮತದ ಓದುಗರಿಗಾಗಿ ಸಿದ್ಧಪಡಿಸಲಾಗಿದೆ.

2015ರ ಜುಲಾಯಿ ತಿಂಗಳಲ್ಲಿ ಕರ್ನಾಟಕ ಸರಕಾರವು ಜೆ.ಎನ್.ಯು. ಜೊತೆ ಒಪ್ಪಂದ ಮಾಡಿಕೊಂಡು, 42 ಲಕ್ಷ ರೂಪಾಯಿಗಳ ವಾರ್ಷಿಕ ಅನುದಾನದ ಸಹಾಯದಿಂದ ಕನ್ನಡ ಅಧ್ಯಯನ ಪೀಠವನ್ನು ಜೆ.ಎನ್.ಯು. ವಿನಲ್ಲಿ ಸ್ಥಾಪಿಸಿತು. ಈ ಪೀಠದ ಸ್ಥಾಪನೆಯಲ್ಲಿ ದೆಹಲಿ ಕರ್ನಾಟಕ ಸಂಘವು ಪ್ರಮುಖ ಸ್ಥಾನ ವಹಿಸಿದೆ. ನಾನು ಅದರ ಮೊದಲ ಪ್ರಾಧ್ಯಾಪಕನಾಗಿ ಅಕ್ಟೋಬರ 1, 2015ರಂದು ಸೇರಿದೆ. ಪೀಠಕ್ಕೆ ಮಾರ್ಗದರ್ಶನ ಮಾಡಲು ಪ್ರೊ. ಬಿ.ಎ. ವಿವೇಕ ರೈ, ಪ್ರೊ. ಟಿ.ಎಸ್. ಸತ್ಯನಾಥ್ ಮತ್ತು ಪ್ರೊ. ಶುಭಾ ದಾಸಗುಪ್ತಾ ಇರುವ ಮೂರು ಜನರ ತಜ್ಞರ ಸಮಿತಿ ರಚಿಸಿಕೊಂಡೆ. ಪೀಠದ ಎಲ್ಲಾ ಚಟುವಟಿಕೆಗಳೂ ಕರ್ನಾಟಕ ಸರಕಾರ ನೀಡುವ ಅನುದಾನದಿಂದ ನಡೆದಿದೆ. ಅದರ ಖರ್ಚುಗಳು ಮತ್ತು ಲೆಕ್ಕ ಪರಿಶೀಲನೆಯು ಜೆ ಎನ್ ಯುವಿನ ನಿಯಮಾನುಸಾರ ನಡೆದಿದೆ. ಅನುದಾನದ ಉಳಿತಾಯ ಮತ್ತು ಸರಕಾರ ನೀಡಿದ ಐದು ಕೋಟಿ ರೂಪಾಯಿಗಳನ್ನು ಒಟ್ಟು ಸೇರಿಸಿ ಇದೀಗ ಐದು ಕೋಟಿಯ ಅರುವತ್ತು ಲಕ್ಷ ರೂಪಾಯಿಗಳನ್ನು ಇಡುಗಂಟಾಗಿ ಇರಿಸಿ, ಅದರ ಬಡ್ಡಿಯಿಂದ ಪೀಠ ನಡೆಯುವಂತೆ ಮಾಡಲಾಗಿದೆ. ಇದರಿಂದಾಗಿ ಪೀಠವು ಮುಚ್ಚಿ ಹೋಗಬಹುದಾದ ಅಪಾಯವು ಇಲ್ಲವಾಗಿದೆ.

ಪೀಠ ಆರಂಭವಾದಾಗ ಅದಕ್ಕೊಂದು ಕೊಠಡಿಯೂ ಇರಲಿಲ್ಲ. 20 ದಿನಗಳ ಸತತ ಪ್ರಯತ್ನ ಮತ್ತು ಸಣ್ಣ ಪ್ರತಿಭಟನೆಯ ಫಲವಾಗಿ ಪೀಠಕ್ಕೊಂದು ಚಿಕ್ಕ ಕೊಠಡಿ ಲಭಿಸಿತು (ಅಕ್ಟೋಬರ 20, 2015). ದುಸ್ಥಿತಿಯಲ್ಲಿದ್ದ ಆ ಕೊಠಡಿಯನ್ನು ನಾನೇ ಸ್ವಂತ ಖರ್ಚಿನಲ್ಲಿ ದುರಸ್ತಿಗೊಳಿಸಿಕೊಂಡೆ. ಈಗ ಮೂರು ಜನರು ಈ ಸಣ್ಣ ಕೊಠಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನೊಂದು ಕೊಠಡಿಗಾಗಿ ಸಲ್ಲಿಸಿದ ಮನವಿಯನ್ನು ವಿಶ್ವವಿದ್ಯಾಲಯ ಇದುವರೆಗೆ ಪುರಸ್ಕರಿಸಲಿಲ್ಲ.

ನವಂಬರ 26, 2015ರಂದು ಪೀಠದ ಉದ್ಘಾಟನೆಯಾಯಿತು. ಪ್ರೊ. ಷ. ಶೆಟ್ಟರ್ ಉದ್ಘಾಟನಾ ಭಾಷಣ ಮಾಡಿದರು. 700ಕ್ಕಿಂತ ಹೆಚ್ಚು ಜನರು ಭಾಗವಹಿಸಿದ್ದ ಈ ಕಾರ್ಯಕ್ರಮವು ಜೆ.ಎನ್.ಯು.ವಿನಲ್ಲಿ ಕನ್ನಡ ಪೀಠವು ಕಾರ್ಯಾರಂಭ ಮಾಡಿದ ವಿಷಯನ್ನು ಸಾರ್ವಜನಿಕರಿಗೆ ತಿಳಿಸಿತು. ಆರಂಭಿಕ ಕಷ್ಟಗಳನ್ನು ಇದಿರಿಸಿ ಬೆಳೆದ ಕನ್ನಡ ಪೀಠವು ಇದೀಗ ಐದನೇ ವರ್ಷದಲ್ಲಿ ಸ್ಥಿರವಾದ ಹೆಜ್ಜೆಗಳನ್ನಿಡುತ್ತಿದೆ.

ಕಳೆದ ಐದು ಶೈಕ್ಷಣಿಕ ವರ್ಷಗಳಲ್ಲಿ ಪೀಠವು ನಡೆಸಿದ ಚಟುವಟಿಕೆಗಳ ಸಂಕ್ಷಿಪ್ತ ವರದಿ ಇಲ್ಲಿ ನೀಡಲಾಗಿದೆ.

**ಮಾನವ ಸಂಪನ್ಮೂಲ:**

ಪೀಠದಲ್ಲಿ ಒಬ್ಬ ಪ್ರಾಧ್ಯಾಪಕ ಮತ್ತು ಇಬ್ಬರು ಯೋಜನಾ ಸಹಾಯಕರಿದ್ದಾರೆ. ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರೂ ಸೇರಿದಂತೆ 65 ಜನರು ಪ್ರಾಥಮಿಕ ಕನ್ನಡ ಕಲಿತಿದ್ದಾರೆ. ಇವರಲ್ಲಿ ಕೆಲವರು ಇಂಟರ್ಮೀಡಿಯೇಟ್ ಹಾಗೂ ಅಡ್ವಾನ್ಸ್ ಮಟ್ಟ ತಲುಪಿದ್ದಾರೆ. ಇವರೆಲ್ಲರೂ ಕನ್ನಡ-ಕರ್ನಾಟಕದ ಮೇಲೆ ಕೆಲಸ ಮಾಡಬಯಸುವ ಕನ್ನಡೇತರರು.

**ಶೈಕ್ಷಣಿಕ ಕೆಲಸಗಳು:**

ಜೆ.ಎನ್.ಯು.ವಿನಲ್ಲಿ ಸಂಶೋಧಕರು ಹಾಗೂ ವಿದ್ಯಾರ್ಥಿಗಳು ಕನ್ನಡ-ಕರ್ನಾಟಕದ ಬಗ್ಗೆ ತೋರಿಸುತ್ತಿರುವ ವಿಶೇಷ ಆಸಕ್ತಿಯನ್ನು ಗಮನಿಸಿ, ಎರಡು ಕ್ರೆಡಿಟ್‌ಗಳ ಟೂಲ್ ಕೋರ್ಸ್‌ಗಳನ್ನೂ ಆಪ್ಷನಲ್ ಕೋರ್ಸುಗಳನ್ನೂ ಸಿದ್ಧಪಡಿಸಲಾಗಿದೆ. ಎಂಫಿಲ್/ ಪಿ.ಎಚ್.ಡಿ. ಅಧ್ಯಯನಗಳಿಗೆ ಬೇಕಾದ ಪಠ್ಯಕ್ರಮವೂ ಸಿದ್ಧಗೊಂಡು ಅದಕ್ಕೆ ಅಕಾಡೆಮಿಕ್ ಕೌನ್ಸಿಲ್ ಸೇರಿದಂತೆ ವಿವಿಧ ಸಮಿತಿಗಳ ಒಪ್ಪಿಗೆ ದೊರೆತಿದೆ. ಆದರೆ ವಿ.ವಿ.ಯು ಇನ್ನೂ ಅವುಗಳನ್ನು ಚಾಲ್ತಿಗೆ ತಂದಿಲ್ಲ. ಈಗ ನಡೆದಿರುವ ಹೊಸ ನೇಮಕಾತಿಯೊಂದಿಗೆ ಅವೆಲ್ಲ ಚಾಲ್ತಿಗೆ ಬಂದೀತೆಂದು ಭಾವಿಸುತ್ತೇನೆ.

**ವಿಚಾರ ಸಂಕಿರಣಗಳು :**

ಕನ್ನಡ ಪೀಠವು ಜೆ.ಎನ್.ಯು.ವಿನ ಇತರ ವಿಭಾಗಗಳು ಮತ್ತು ವಿವಿಧ ಅಕಾಡೆಮಿಗಳ ಸಹಯೋಗದಿಂದ ಅನೇಕ ಕಾರ್ಯಕ್ರಮಗಳನ್ನು ನಡೆಸಿದ್ದು ಅವುಗಳಲ್ಲಿ ಮುಖ್ಯವಾದುವು ಈ ಕೆಳಗಿನಂತಿವೆ-

1. ಭಾರತೀಯ ಭಕ್ತಿ ಪರಂಪರೆಯಲ್ಲಿ ಕನಕದಾಸ (ಆಗಸ್ಟ್ 26, 2016, ಕನಕ ಅಧ್ಯಯನ ಕೇಂದ್ರ, ಬೆಂಗಳೂರು ಜೊತೆಗೆ)



**ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠದ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ್ದ ಖ್ಯಾತ ಸಂಶೋಧಕ ಷ. ಶೆಟ್ಟರ್ ಮತ್ತು ಗಣ್ಯರೊಂದಿಗೆ ಡಾ. ಪುರುಷೋತ್ತಮ ಬಿಳಿಮಲೆ**

2. International conference on - Political Economy in South Asia, January 4-6, 2017 (CHS, KMU ಜೊತೆಗೆ)
3. ಸ್ವಾತಂತ್ರ್ಯೋತ್ತರ ಭಾರತೀಯ ಸಾಹಿತ್ಯದಲ್ಲಿ ಆಧುನಿಕತೆಯ ಪರಿಕಲ್ಪನೆ, (ಜನವರಿ 19-21, 2017, ಕುವೆಂಪು ಭಾಷಾ ಭಾರತಿ ಜೊತೆಗೆ)
4. ಪ್ರಾದೇಶಿಕ ಭಾಷಾ ಮಾಧ್ಯಮಗಳು ಸಾಗುತ್ತಿರುವ ದಿಕ್ಕು (ಮಾರ್ಚ್ 17, 2017, ಮಾಧ್ಯಮ ಅಕಾಡೆಮಿ, ಬೆಂಗಳೂರು ಜೊತೆಗೆ)
5. ತಾಯ್ನುಡಿಗಳು ಮತ್ತು ರಾಷ್ಟ್ರೀಯತೆ (ಫೆಬ್ರವರಿ 21, 2018)
6. ಭಾರತೀಯ ಅಭಿಜಾತ ಸಾಹಿತ್ಯದಲ್ಲಿ ಮಹಾಭಾರತಗಳು: ವಿಚಾರ ಸಂಕಿರಣ (ಆಗಸ್ಟ್ 21, 2018, ಒಡಿಯಾ ಪೀಠದ ಜೊತೆಗೆ)
7. ಕರ್ನಾಟಕದ ಪರಿಕಲ್ಪನೆ : ರಾಷ್ಟ್ರೀಯ ವಿಚಾರ ಸಂಕಿರಣ (ನವಂಬರ 27, 2018)
8. ಅಭಿಜಾತ ಪಠ್ಯಗಳ ಪಯಣ (ಫೆಬ್ರವರಿ 16, 2019)
9. ಭಾರತೀಯ ರಂಗಭೂಮಿಗೆ ಗಿರೀಶ್ ಕಾರ್ನಾಡರ ಕೊಡುಗೆ- ವಿಚಾರ ಸಂಕಿರಣ, ಸಪ್ಟಂಬರ 3, 2019)
10. ನನ್ನ ಕನ್ನಡ: ವಿಚಾರ ಸಂಕಿರಣ (ನವಂಬರ 30, 2019)


**ಕಮ್ಮಟಗಳು :**

ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ಕೆಲವು ಕಮ್ಮಟಗಳನ್ನು ಆಯೋಜಿಸಲಾಗಿದೆ

1. ಶೈಕ್ಷಣಿಕ ಪತ್ರಿಕೋದ್ಯಮ ಕಮ್ಮಟ (ಸಪ್ಟಂಬರ 22-23, 2017)
2. ಭಾರತದ ದಲಿತ - ಆದಿವಾಸಿ ಜನಪದ ಕಲಾವಿದರ ಸ್ಥಿತಿ ಗತಿ, (ನವಂಬರ 18, 2017, ತೇಜಸ್ವಿ ಕಟ್ಟೀಮನಿ ಟ್ರಸ್ಟ್, ಧಾರವಾಡ ಜೊತೆಗೆ)

**ವಿಶೇಷ ಉಪನ್ಯಾಸಗಳು:**

1. ಕನ್ನಡದ ಮಹಿಳಾ ಆತ್ಮಕತೆಗಳು, ಡಾ. ತಾರಿಣಿ ಶುಭದಾಯಿನಿ; (ನವಂಬರ 17, 2016, ಕರ್ನಾಟಕ ಸಾಹಿತ್ಯ ಅಕಾಡೆಮಿ ಜೊತೆಗೆ)
2. ವಚನಮಾರ್ಗ - ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ, (ಫೆಬ್ರವರಿ 15, 2018)
3. ಭಕ್ತಿಯ ವಿವಿಧ ಆಯಾಮಗಳು, ಶ್ರೀನಿವಾಸನ್, (ಸಪ್ಟಂಬರ 8, 2018)
4. ಅಸುರ ಪರಿಕಲ್ಪನೆ : ಶ್ರೀ ಯೋಗೇಶ್ ಮಾಸ್ತರ್, (ಡಿಸೆಂಬರ್ 05, 2018)
5. ಭಾಷಾ ಕಲಿಕೆಯ ಹೊಸ ವಿಧಾನಗಳು –




**ಜೆ.ಎನ್.ಯು. ಕನ್ನಡ ಅಧ್ಯಯನ ಪೀಠ ಪ್ರಕಟಿಸಿದ ಶ್ರೀವಿಜಯನ 'ಕವಿರಾಜ ಮಾರ್ಗ'ದ ಇಂಗ್ಲೀಷ್ ಅನುವಾದಿತ ಕೃತಿಯ ಮುಖಪುಟ.**

ಪ್ರೊ. ರಾಕೇಶ್ ರಂಜನ್, ಕೊಲಂಬಿಯಾ ವಿವಿ, (ಎಪ್ರಿಲ್ 6, 2019)

### ವಿಸ್ತರಣಾ ಚಟುವಟಿಕೆಗಳು:

ಪೀಠವು ಜೆ.ಎನ್.ಯು.ವಿನಲ್ಲಿ ತನ್ನ ಅಸ್ತಿತ್ವವನ್ನು ತೋರಿಸುವ ಉದ್ದೇಶದಿಂದ ಕೆಲವು ವಿಸ್ತರಣಾ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ಮುಖ್ಯವಾದ ಕೆಲವು ಈ ಕೆಳಗಿನಂತಿವೆ–

1. ಶಿವರಾಮ ಕಾರಂತರ ಯಕ್ಷರಂಗದ ಮಾದರಿಯಲ್ಲಿ ಯಕ್ಷಗಾನ ಪ್ರದರ್ಶನ, ನವಂಬರ 25, 2015
2. ಕರ್ನಾಟಕ– ಒಂದು ರಾಜ್ಯ, ಹಲವು ದನಿಗಳು (ಸಹಯೋಗ, ಜಾನಪದ ಅಕಾಡಮಿ, ಬೆಂಗಳೂರು): ನವಂಬರ 18, 2016
3. ಗೊಂಬೆಯಾಟ: ಬೆಳಗಲ್ ವೀರಣ್ಣ ಅವರಿಂದ, ಅಗೋಸ್ತು 18, 2017
4. ತುಳು ಯಕ್ಷಗಾನ : ಮಂಗಳೂರಿನ ಯಕ್ಷಮಂಜೂಷ ತಂಡ, ಜನವರಿ 25 2018
5. ಗಮಕ, ಹರಿಕತೆ ಮತ್ತು ಯಕ್ಷಗಾನ : ಫೆಬ್ರವರಿ 16, 2019
6. ಗಿರೀಶ ಕಾರ್ನಾಡರ ರಕ್ತ ಕಲ್ಯಾಣ ನಾಟಕ, ಎನ್.ಎಸ್.ಡಿ. ಕಲಾವಿದರಿಂದ, ಸಪ್ಟಂಬರ 3, 2019
7. ಸಾಸ್ವೆಹಳ್ಳಿ ಸತೀಶ್ ನಿರ್ದೇಶನದ 'ಹೂವು' ನಾಟಕ, (ನವಂಬರ 28, 2019)

ದೇಶ ವಿದೇಶಗಳ ಆರು ನೂರಕ್ಕೂ ಹೆಚ್ಚು ವಿದ್ವಾಂಸರು ಪೀಠಕ್ಕೆ ಭೇಟಿ ನೀಡಿದ್ದಾರೆ.

### ಗ್ರಂಥಾಲಯ:

ಆರಂಭಿಕ ಹಂತದಲ್ಲಿ ಮುಖ್ಯ ಗ್ರಂಥಾಲಯದಲ್ಲಿ ವಿಶ್ವವಿದ್ಯಾಲಯ ಸ್ಥಳ ನೀಡಿರಲಿಲ್ಲ. ಹಾಗಾಗಿ ನಿಕಾಯದಲ್ಲಿಯೇ ಗ್ರಂಥ ಭಂಡಾರವನ್ನು ಆರಂಭಿಸಿ, ದಾನಿಗಳಿಂದ ಸುಮಾರು ನಾಲ್ಕು ಸಾವಿರ ಪುಸ್ತಕಗಳನ್ನು ಸಂಗ್ರಹಿಸಲಾಯಿತು. ಅಲ್ಲಿ ಸ್ಥಳ ಸಾಕಾಗದ್ದರಿಂದ ಮುಖ್ಯ ಗ್ರಂಥಾಲಯದಲ್ಲಿ ಸ್ಥಳ ದೊರಕಿಸಿಕೊಳ್ಳಲು ಸುಮಾರು ಒಂದು ವರ್ಷಗಳವರೆಗೆ ನಿರಂತರ ಹೋರಾಟ ನಡೆಸಬೇಕಾಯಿತು. ಕೊನೆಗೂ ಮುಖ್ಯ ಗ್ರಂಥಾಲಯದ ಆರನೇ ಮಹಡಿಯಲ್ಲಿ ಸ್ಥಳ ದೊರಕಿದೆ. ಈಗ ಅಲ್ಲಿ ಗ್ರಂಥಾಲಯವನ್ನು ಸಜ್ಜುಗೊಳಿಸಲಾಗುತ್ತಿದೆ.

### ಕನ್ನಡ ಪೀಠದ ಪ್ರಕಟಣೆಗಳು :

ಪೀಠವು ಅಭಿಜಾತ ಕೃತಿಗಳನ್ನು ಆಂಗ್ಲ ಭಾಷೆಗೆ ಅನುವಾದಿಸುವ ಯೋಜನೆಗಳನ್ನು ಕೈಗೆತ್ತಿಕೊಂಡಿದೆ. ಈ ಅನುವಾದಗಳನ್ನು ದೆಹಲಿಯ ಮನೋಹರ ಪಬ್ಲಿಕೇಶನ್ಸ್ ಅವರ ಮೂಲಕ ಪ್ರಕಟಿಸಲಾಯಿತು. ಮನೋಹರ್ ಪ್ರಕಾಶನವು ಕನ್ನಡ ಪೀಠದ ಪ್ರಕಟಣೆಗಳನ್ನು ದೇಶ ವಿದೇಶಗಳ ವಿಶ್ವವಿದ್ಯಾಲಯಗಳಿಗೆ ತಲುಪಿಸಿದೆ. ಕಳೆದ ಐದು ವರ್ಷಗಳಲ್ಲಿ ಕನ್ನಡ ಪೀಠವು ಈ ಕೆಳಗಿನ ಪುಸ್ತಕಗಳನ್ನು ಇಂಗ್ಲಿಷಿಗೆ ಅನುವಾದಿಸಿ ಪ್ರಕಟಿಸಿದೆ.

1. ಶ್ರೀ ವಿಜಯನ 'ಕವಿರಾಜ ಮಾರ್ಗ', (ಅನು: ಪ್ರೊ. ಆರ್.ವಿ.ಎಸ್. ಸುಂದರಂ ಮತ್ತು ದೇವೆನ್ ಪಟೇಲ್; 2017)
2. 60 ತುಳು ಜನಪದ ಕತೆಗಳ 'ರೈನ್ ಬಾಯ್' (ಅನು: ಪ್ರೊ. ಸುರೇಂದ್ರ ರಾವ್ ಮತ್ತು ಪ್ರೊ. ಕೆ. ಚಿನ್ನಪ್ಪ ಗೌಡ, 2018)
3. ಶಿವಕೋಟ್ಯಾಚಾರ್ಯನ 'ವಡ್ಡಾರಾಧನೆ' (ಅನು: ಪ್ರೊ. ಆರ್ ವಿ ಎಸ್ ಸುಂದರಂ, ಪ್ರೊ. ಶುಭಚಂದ್ರ ಮತ್ತು ಡಾ. ಎಚ್.ಎಸ್. ಕೋಮಲೇಶ, 2020)
4. ರನ್ನನ ಗದಾಯುದ್ಧ (ಅನು: ಪ್ರೊ. ಆರ್.ವಿ.ಎಸ್. ಸುಂದರಂ ಮತ್ತು ಅಮ್ಮೆಲ್ ಶೆರನ್, 2018)
5. ರಹಮತ್ ತರೀಕೆರೆಯವರ 'ಅಮೀರ್ಬಾಯಿ ಕರ್ನಾಟಕಿ' (ಅನು: ಸಿ.ಎಸ್. ಸರ್ವಮಂಗಳಾ, 2018)
6. ಗಣೇಶ ಅಮೀನಗಡ ಅವರ 'ಏಣಗಿ ಬಾಳಪ್ಪ ಜೀವನ ಚರಿತ್ರೆ' (ಅನು: ಪ್ರೊ. ಕೃಷ್ಣಮೂರ್ತಿ ಚಂದರ್, 2018)
7. ಶಿವರಾಮ ಕಾರಂತರ 'ಅಳಿದ ಮೇಲೆ' (ಅನು: ಪ್ರೊ. ಪ್ರಮೋದ್ ಮುತಾಲಿಕ್, 2019)
8. ಮಹಿಳಾ ಭಕ್ತಿಕವಿಗಳು (ಅನು: ಡಾ. ಸುಜಾತಾ ರೆಡ್ಡಿ 2019, ಕೋವಿಡ್ ನಿಂದಾಗಿ ಪ್ರಕಟಣೆ ಅರ್ಧದಲ್ಲಿ ನಿಂತಿದೆ.

### ಇತರ ಕಾರ್ಯಕ್ರಮಗಳು

1. ಪೀಠವು ಪ್ರತಿವರ್ಷವೂ ನವಂಬರ್ 01 ರಂದು ಕನ್ನಡ ರಾಜ್ಯೋತ್ಸವನ್ನು ಆಚರಿಸಿದೆ.
2. ಭಾರತೀಯ ಭಾಷೆಗಳನ್ನು ಗಮನದಲ್ಲಿಟ್ಟು ಕೊಂಡು ಬಹುಭಾಷಾ ಕವಿಗೋಷ್ಠಿಯನ್ನು ಆಯೋಜಿಸಿದೆ.
3. ಕನ್ನಡ ಕಲಿಕೆಗೊಂದು ಜಾಲತಾಣವನ್ನು ಸಿದ್ಧಪಡಿಸಿದೆ.

### ದೆಹಲಿ ಕನ್ನಡಿಗರು ಈಗ ಗಮನಿಸಬೇಕಾದ ಇತರ ಮುಖ್ಯ ಅಂಶಗಳು:

1. ಪೀಠದ ಮೂಲಧನವನ್ನು ಈಗಿರುವ ಐದು ಕೋಟಿಯಿಂದ ಎಂಟು ಕೋಟಿಗೇರಿಸಬೇಕು. ಆಗ ಸುಮಾರು 60 ಲಕ್ಷರೂಗಳ ವಾರ್ಷಿಕ ಆದಾಯ ದೊರೆಯುತ್ತದೆ.
2. ಕರ್ನಾಟಕ ಸರಕಾರವು ಒಪ್ಪಿಕೊಂಡ ಪ್ರಕಾರ 4 ವರ್ಷಗಳವರೆಗೆ ಕನ್ನಡ ಪೀಠಕ್ಕೆ ಅನುದಾನ ನೀಡಿದೆ. ಈಗ ಕನ್ನಡ ಪೀಠವು ಯು.ಜಿ.ಸಿ. ಯ ಅಡಿಗೆ ಬರಬೇಕು. ಆಗ ಪೀಠದ ಕಡೆಗೆ ಇನ್ನಷ್ಟು ಪ್ರತಿಭಾವಂತರು ಬರಲು ಸಾಧ್ಯ.
3. ಜೆ.ಎನ್.ಯು. ವಿನಲ್ಲಿ ಕುವೆಂಪು ಸ್ಮಾರಕ ಉಪನ್ಯಾಸ ಮಾಲೆ (ಅಥವಾ ಉಚಿತವಾದ ಬೇರೆ ಹೆಸರಿನಲ್ಲಿ) ಆರಂಭವಾಗಬೇಕು.

### ಜಾಲತಾಣದಲ್ಲಿ ಮಾಹಿತಿ:

ಕನ್ನಡ ಪೀಠವು ನಡೆಸಿದ ಮುಖ್ಯ ಕಾರ್ಯಕ್ರಮಗಳನ್ನು ಯೂ ಟ್ಯೂಬಿನಲ್ಲಿ ಸಾರ್ವಜನಿಕರು ವೀಕ್ಷಿಸಬಹುದು.

### ಕೊನೆಯ ಮಾತು:

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡದ ಶೈಕ್ಷಣಿಕ ಧ್ವನಿ ಬಲಗೊಳ್ಳಬೇಕೆಂಬ ಹಠದಲ್ಲಿ ಕಳೆದ ಐದು ವರ್ಷ ಕೆಲಸ ಮಾಡಿದ್ದೇನೆ. ಈ ಅವಧಿಯಲ್ಲಿ ಜೆ ಎನ್ ಯು ಅನೇಕ ಏಳು ಬೀಳುಗಳನ್ನು ಕಂಡಿದೆ. ಇವೆಲ್ಲದರ ನಡುವೆಯೂ ಪೀಠದ ಬೆಳವಣಿಗೆ ಕುಂಠಿತವಾಗದಂತೆ ನೋಡಿಕೊಂಡಿದ್ದೇನೆ. ಅದು ಸಾಕಷ್ಟು ಫಲ ನೀಡಿದ್ದರ ಬಗ್ಗೆ ನನಗೆ ತೃಪ್ತಿಯಿದೆ. ಮುಂದೆ ಬರುವವರು ಪೀಠವನ್ನು ಇನ್ನಷ್ಟು ಅರ್ಥಪೂರ್ಣವಾಗಿ ಬೆಳೆಸುತ್ತಾರೆ ಎಂಬ ನಂಬಿಕೆ ನನ್ನದು.

ಹಿಂದೊಮ್ಮೆ ಬರೆದಂತೆ, ಸಂಸ್ಥೆಗಳನ್ನು ಬೆಳೆಸುವ ಭರದಲ್ಲಿ ವೈಯಕ್ತಿಕವಾಗಿ ಹೆಚ್ಚು ಬರೆಯಲಾಗಲೇ ಇಲ್ಲ. ಈಗ ಆ ಅರಕೆಯನ್ನು ತುಂಬಿಕೊಳ್ಳಬೇಕಾಗಿದೆ. ಕಾಗೆ ಮುಟ್ಟಿದ ನೀರಿಗೆ ಸಿಕ್ಕಿದ ಅಸಾಮಾನ್ಯ ಪ್ರತಿಕ್ರಿಯೆಯು ನನ್ನ ಬರೆಯುವ ಉತ್ಸಾಹವನ್ನು ಹೆಚ್ಚು ಮಾಡಿದೆ.

ಕನ್ನಡ ಅಧ್ಯಯನ ಪೀಠದ ಎಲ್ಲಾ ಚಟುವಟಿಕೆಗಳಿಗೆ ಕರ್ನಾಟಕ ಸರಕಾರದ ಕನ್ನಡ ಸಂಸ್ಕೃತಿ ಇಲಾಖೆ ಬೆಂಬಲ ನೀಡಿದೆ. ದೆಹಲಿ ಕರ್ನಾಟಕ ಸಂಘವು ಜೊತೆ ನಿಂತಿದೆ. ನೀವೆಲ್ಲ ಕನ್ನಡ ಪೀಠವನ್ನು ನಿಮ್ಮದೆಂದೇ ಭಾವಿಸಿ ಸಹಕರಿಸಿದ್ದೀರಿ.

ಎಲ್ಲರಿಗೂ ಕೃತಜ್ಞತೆಗಳು.

ರಾಜಧಾನಿಯಲ್ಲಿ ಕನ್ನಡ ಉಳಿಯಲಿ, ಇನ್ನಷ್ಟು ಬೆಳೆಯಲಿ

**ಡಾ. ಪುರುಷೋತ್ತಮ ಬಿಳಿಮಲೆ**
**ಅಗೋಸ್ತು 20, 2020**



**ಜೆ.ಎನ್.ಯು.ವಿನ ಕನ್ನಡ ಅಧ್ಯಯನ ಪೀಠ ಆಯೋಜಿಸಿದ ಕಾರ್ಯಾಗಾರದ ನೋಟ**

# ಭಿವಾಡಿಯ ಕನ್ನಡ ಕಲಿಕಾ ಕೇಂದ್ರಕ್ಕೆ ವರ್ಷದ ಸಂಭ್ರಮ

ಕಳೆದ ವರ್ಷ ಆಗಸ್ಟ್ ತಿಂಗಳ 4ನೇ ತಾರೀಖಿನಂದು ಆರಂಭಗೊಂಡ 'ಭಿವಾಡಿ ಕನ್ನಡ ಕಲಿಕಾ ಕೇಂದ್ರ'ವು ಇಲ್ಲಿನ ಸುಮಾರು 50ಕ್ಕೂ ಮಿಕ್ಕ ಕನ್ನಡಿಗ ಕುಟುಂಬಗಳ 5 ರಿಂದ 13 ವಯೋಮಾನದ 30 ರಷ್ಟು ಕಂದಮ್ಮಗಳಿಗೆ ತಮ್ಮ ಮಾತೃಭಾಷೆ ಮತ್ತು ತಾಯ್ನೆಲದ ಕಂಪನ್ನು ತಿಳಿಸುವಲ್ಲಿ ಸಹಕರಿಸಿದೆ ಎನ್ನಬಹುದು.

ಅಗಸ್ಟ್ ತಿಂಗಳ ಅಭಿಮತದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು 'ನಮ್ಮ ನಮ್ಮೊಳಗೆ' ಲೇಖನದಲ್ಲಿ ಭಿವಾಡಿ ಕನ್ನಡ ಕಲಿಕಾ ಅಭಿಯಾನವನ್ನು ಉಲ್ಲೇಖಿಸಿ ಬರೆದಿರುವುದು ಸಂತಸದ ವಿಚಾರ. ಇದುವರೆಗೂ ಹೊರಗಿನಿಂದ ಯಾವುದೇ ಧನಸಹಾಯವನ್ನು ಪಡೆಯದೇ ಇಲ್ಲಿನ ಕನ್ನಡ ಶಾಲೆಯನ್ನು ಸ್ವಯಂ ಹಣಕಾಸಿನಿಂದ ನಡೆಸಲಾಗುತ್ತಿದೆ ಎಂದು ಹೇಳಲು ಸಂತೋಷವಾಗುತ್ತಿದೆ. ಆದರೆ ಇನ್ನು ಮುಂದೆ ಧನಸಹಾಯದ ನಿರೀಕ್ಷೆಯಲ್ಲಿದ್ದೇವೆ.

ಪ್ರತಿ ರವಿವಾರ ಬೆಳಗ್ಗೆ 9.30 ರಿಂದ 11.30 ರವರೆಗೆ ಭಿವಾಡಿಯ ಕೋಸ್ಮೋಸ್ ಗ್ರೀನ್ಸ್‌ನ ಪುಟಾಣಿ ಮಕ್ಕಳ ಶಾಲೆಯೊಂದರಲ್ಲಿ ಮಕ್ಕಳಿಗೆ ತರಗತಿಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಬರಲಾಗಿತ್ತು. ಇಬ್ಬರು ಸ್ಥಳೀಯ ಶಿಕ್ಷಕಿಯರಾದ ಶ್ರೀಮತಿ ಅರುಣಾ ನಾಗಪ್ಪ ಗೌಡ ಮತ್ತು ಶ್ರೀಮತಿ ಮಲ್ಲಿಕಾ ಸಂತೋಷ ಶೇರಿ ಇವರು ಮಕ್ಕಳಿಗೆ ಕನ್ನಡ ಕಲಿಸುತ್ತಿದ್ದರು. ಮಕ್ಕಳಿಗೆ ಅಕ್ಷರಾಭ್ಯಾಸ ಚೆನ್ನಾಗಿ ನಡೆಯುತ್ತಿರುವ ಸಮಯದಲ್ಲಿಯೇ, ಕೊರೊನ ಬಾಧೆಯಿಂದಾಗಿ ತರಗತಿಗಳನ್ನು ಸ್ಥಗಿತಗೊಳಿಸುವ ಅನಿವಾರ್ಯತೆ ಒದಗಿ ಬಂತು.

ಅಕ್ಷರಾಭ್ಯಾಸ, ಪರೀಕ್ಷೆ ಇತ್ಯಾದಿಗಳ ಜೊತೆಗೆ, ಕೆಲವು ವಿಶಿಷ್ಟ ಕಾರ್ಯಕ್ರಮಗಳನ್ನು ಈ ಮಧ್ಯೆ ಹಮ್ಮಿಕೊಂಡಿದ್ದು ಅವುಗಳ ಸೂಕ್ಷ್ಮ ವಿವರಗಳನ್ನು ಇಲ್ಲಿ ನೀಡಲಾಗಿದೆ.

ದಿನಾಂಕ 15-09-2019 ರಂದು ಈಗ ಭಿವಾಡಿ ನಿವಾಸಿಯಾಗಿರುವ ಕನ್ನಡಿಗ ರಾಜೀವ ಕಾಲ್ರಾರವರು 90 ನಿಮಿಷಗಳ ಕಾಲ ಬಾಹ್ಯಾಕಾಶ ವಿಜ್ಞಾನದ ಬಗ್ಗೆ ಕನ್ನಡ ಶಾಲೆಯಲ್ಲಿ ಉಪನ್ಯಾಸ ನೀಡಿದರು. ಇವರು ದೇಶದ ಪ್ರತಿಷ್ಠಿತ ಬಾಹ್ಯಾಕಾಶ ವಿಜ್ಞಾನ ಸಂಸ್ಥೆ ಇಸ್ರೋ ದಲ್ಲಿ ಡಾ. ಅಬ್ದುಲ್ ಕಲಾಂ ಅವರ ಜತೆ ಸೇವೆ ಸಲ್ಲಿಸಿದ್ದ ನಿವೃತ್ತ ಹಿರಿಯ ವಿಜ್ಞಾನಿಯಾಗಿದ್ದಾರೆ.





ಅಂತೆಯೇ 3.11.2019 ರಂದು ನಿವೃತ್ತ ವಿಜ್ಞಾನಿ ರಾಜೀವ ಕಾಲ್ರಾ ಹಾಗೂ ಅವರ ಸಹಧರ್ಮಿಣಿ ಶ್ರೀಮತಿ ನಂದಿನಿ ಕಾಲ್ರಾ ಅವರಿಬ್ಬರೂ ತಮ್ಮ ಪರ್ಸನಲ್ ಕಂಪ್ಯೂಟರ್ ಒಂದನ್ನು ಭಿವಾಡಿ ಕನ್ನಡಿಗರಿಗೆ ಕೊಡುಗೆ ನೀಡಿ, ಕಂದಮ್ಮಗಳಿಗೂ ಮತ್ತು ಆಸಕ್ತ ಹಿರಿಯರಿಗೂ ಕಂಪ್ಯೂಟರ್‌ನ ಬಿಡಿ ಭಾಗಗಳ ಬಗ್ಗೆ ವಿವರಿಸಿದರು. ದೀಪಾವಳಿ ಹಬ್ಬದ ಸಿಹಿ ಹಂಚಿಕೆಯ ನಂತರ ಆಮಿಟಿ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕ ನವೀನ ಜೆ.ಎಚ್. ಅವರು ಮಕ್ಕಳೊಂದಿಗೆ "ಅ ಆ ಇ ಈ ಕನ್ನಡದ ಅಕ್ಷರಮಾಲೆ... ಅಮ್ಮಾ ಎಂಬುದೆ ಕಂದನ ಕರುಳಿನ ಕರೆಯೋಲೆ" ಪದ್ಯವನ್ನು ರಾಗ ಬದ್ಧವಾಗಿ ಹಾಡಿದ್ದು 'ಕರ್ನಾಟಕ ರಾಜ್ಯೋತ್ಸವ'ಕ್ಕೆ ಮೆರುಗು ನೀಡಿತ್ತು. ಮುಂದೆ ಇದೇ ಹಾಡನ್ನು ಡಿಸೆಂಬರ್ 7ರಂದು ನಡೆದ ಕರ್ನಾಟಕ ರಾಜ್ಯೋತ್ಸವ ದಿನದಂದೂ ನೆರೆದಿದ್ದ 250 ಕ್ಕೂ ಮಿಕ್ಕಿದ ಭಿವಾಡಿ ಮತ್ತು ದೆಹಲಿ, ಗುರುಗ್ರಾಮದ ಕನ್ನಡಿಗರ ಸಮಕ್ಷಮದಲ್ಲೂ ಪುಟಾಣಿಗಳು ಹಾಡಿ ತೋರಿಸಿದ್ದು ಅಭಿನಂದನಾರ್ಹ ಸಂಗತಿ.

ಜೂನ್ 5 ರಂದು ದೆಹಲಿ ಕನ್ನಡ ಶಾಲೆಯ ಶಿಕ್ಷಕ ಅರವಿಂದ ಬಿಜ್ಜೈ ಅವರು ಆಯೋಜಿಸಿ ರಾಜಧಾನಿ ಪರಿಸರದ ಕನ್ನಡ ಕುಡಿಗಳಿಗಾಗಿ ಸಂಯೋಜಿಸಿದ್ದ 'ಕನ್ನಡ ಶಿಶುಗೀತೆ' ಎಂಬ ಕಾರ್ಯಕ್ರಮದಲ್ಲಿ ಕಲಿಕಾ ಕೇಂದ್ರದ 15 ಮಕ್ಕಳು ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ತೋರಿದ್ದು ಅಭಿಮಾನ ತಂದಿತ್ತು.

ಕರೊನಾದಿಂದಾಗಿ ಕನ್ನಡ ಕಲಿಕಾ ಶಾಲೆ ಸ್ಥಗಿತವಾದ ಸಂಕಷ್ಟ ಸಮಯದಲ್ಲಿ ಅಮಿಟಿ ಯೂನಿವರ್ಸಿಟಿಯಲ್ಲಿ ನಿರ್ದೇಶಕರಾಗಿರುವ ಕನ್ನಡಿಗ ಡಾ. ಶ್ರೀಧರ್‌ರವರು ಅಂತರ್ಜಾಲದ ಮೂಲಕ ಮಕ್ಕಳಿಗೆ ಜೂನ್ 14 ರಿಂದ ಪ್ರತೀ ಭಾನುವಾರ ಎರಡು ಗಂಟೆಗಳ ಕಾಲ ಆನ್ ಲೈನ್ ತರಗತಿ ನಡೆಸಲು ಸ್ವಯಂಪ್ರೇರಣೆಯಿಂದ ಮುಂದೆ ಬಂದರು. ಅವರ ಪತ್ನಿ ರತ್ನಶ್ರೀಯವರೂ ಕೈ ಜೋಡಿಸಿದರು. ಶ್ರೀಧರ್ ದಂಪತಿಗಳು ಮಕ್ಕಳಿಗೆ ಕನ್ನಡ ಕಲಿಕೆಯ ಹೊಸದೊಂದು ಮಾದರಿಯನ್ನೇ ತೆರೆದಿಟ್ಟರು. ಮಕ್ಕಳು ಉತ್ಸಾಹದಿಂದ ವಾರದ ತರಗತಿಗಳಿಗೆ ಕಾಯುತ್ತಾ, ಕೊಟ್ಟ ಮನೆಪಾಠಗಳನ್ನು ಶ್ರದ್ಧೆಯಿಂದ ಮಾಡಿ ವಾಟ್ಸಪ್ ಗ್ರೂಪಿನಲ್ಲಿ ಹಾಕುತ್ತಿದ್ದಾರೆ. ಈ ಆನ್ ಲೈನ್ ತರಗತಿಯಲ್ಲಿ ಒಂದು ಸರ್ಪ್ರೈಸ್ ಟೆಸ್ಟ್ ಇರುತ್ತದೆ. ಎಲ್ಲಾ ಮಕ್ಕಳೂ ಟೆಸ್ಟನ್ನು ಖುಷಿಯಿಂದ ಬರೆಯುತ್ತಾರೆನ್ನುವುದು ವಿಶೇಷ. ಜೂನ್ ತಿಂಗಳ 22ರಂದು 'ಫಾದರ್ಸ್ ಡೇ' ಹಿನ್ನೆಲೆಯಲ್ಲಿ ತಮ್ಮೊಳಗಿನ ವಿವಿಧ ಕಲೆಯನ್ನು ಪ್ರದರ್ಶಿಸಿ ಪುಟಾಣಿಗಳು ಖುಷಿ ಪಟ್ಟರು.

ಈ ಬಾರಿಯ ಗಣೇಶೋತ್ಸವ ಪ್ರಯುಕ್ತ ಡಾ. ಶ್ರೀಧರ್ ದಂಪತಿಗಳ ಮತ್ತು ಗೋಪಾಲಕೃಷ್ಣ ಭಟ್ ಸಾರಥ್ಯದಲ್ಲಿ ಅಂತರ್ಜಾಲದ ಮೂಲಕ ಆಯೋಜಿಸಲ್ಪಟ್ಟ 'ಪ್ರತಿಭಾ ಪ್ರದರ್ಶನ'ದಲ್ಲಿ ಒಟ್ಟು 28 ಮಕ್ಕಳು ವಿವಿಧ ಕಲಾಪ್ರಕಾರದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ದೆಹಲಿ, ಗುರುಗ್ರಾಮಗಳ ಕನ್ನಡ ಶಾಲಾ ಶಿಕ್ಷಕಿಯರಾದ ಶ್ರೀಮತಿ ಜ್ಯೋತಿ ಪೊದ್ದಾರ್, ಶ್ರೀಮತಿ ಸುಜಾತ ನಿಂಬಾಳ್ ಮತ್ತು ಹಿರಿಯ ನಿವೃತ್ತ ಅಧಿಕಾರಿ ಶ್ರೀಮತಿ ಪುಷ್ಪ ಸುಖಾದ್ ಮಠ್ ಅವರನ್ನು ಆನ್‌ಲೈನ್‌ನಲ್ಲಿಯೇ ಸ್ಪರ್ಧೆಯ ಜಡ್ಜ್ ಗಳನ್ನಾಗಿ ಆಹ್ವಾನಿಸಲಾಗಿತ್ತು. ಪ್ರತಿಭಾ ಪ್ರದರ್ಶನ ಸ್ಪರ್ಧೆ ಮತ್ತು ಕಾರ್ಯಕ್ರಮ ಮಕ್ಕಳ ಮತ್ತು ಪೋಷಕರ ಉತ್ತಮ ಸ್ಪಂದನೆಯೊಂದಿಗೆ ಅಚ್ಚುಕಟ್ಟಾಗಿ ನೆರವೇರಿತು. ಕಾರ್ಯಕ್ರಮದಲ್ಲಿ ರಾಜೀವ್ ಕಾಲ್ರಾ ರವರ ಇಡೀ ಕುಟುಂಬ ಭಾಗಿಯಾಗಿ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಕೊಡುವ ಬಹುಮಾನದ ಪ್ರಾಯೋಜಕರಾಗಿದ್ದು ವಿಶೇಷವಾಗಿತ್ತು.

ಅತಿಯಾದ ಹುಮ್ಮಸ್ಸಿನಿಂದ ಕಳೆದ ಎರಡು ವರ್ಷಗಳಿಂದ ಈ ಬಗ್ಗೆ ಸಾಕಷ್ಟು ಓಡಾಟ ಮತ್ತು ಜತನ ಮಾಡಿ, ಸದ್ಯ ಸುಸೂತ್ರವಾಗಿ ನಡೆಸುತ್ತಿರುವ ಕನ್ನಡ ಕಲಿಕಾ ಕೇಂದ್ರದ ಈವರೆಗಿನ ಯಶಸ್ಸಿನಲ್ಲಿ ಪ್ರತಿಯೊಬ್ಬ ಭಿವಾಡಿ ಕನ್ನಡಿಗನದ್ದೂ ಗಣನೀಯ ಕೊಡುಗೆಯಿದೆ. ಜೊತೆಗೆ 'ಭಿವಾಡಿ ಕನ್ನಡ ಸಂಘ'ದ ವ್ಯವಸ್ಥಾಪಕ ಮಂಡಳಿಯ ಸದಸ್ಯರ ಕೊಡುಗೆಯೂ ಅಪ್ರತಿಮ ಮಾದರಿಯಾಗಿದೆ.

ಇದೇ ಉತ್ಸಾಹದಿಂದ ಇನ್ನೂ ಹೆಚ್ಚು ಮಕ್ಕಳನ್ನು ಕಲೆಹಾಕಿ ಕನ್ನಡ ಭಾಷೆಯ ಕಂಪನ್ನು ಹಂಚುವ ಧ್ಯೇಯ ನಮ್ಮೆಲ್ಲರದ್ದಾಗಿದ್ದು ಮಾತೆ ಸರಸ್ವತಿ ಎಲ್ಲರನ್ನೂ ಅನುಗ್ರಹಿಸಲಿ ಎಂದು ಪ್ರಾರ್ಥಿಸೋಣ.

***ಗೋಪಾಲಕೃಷ್ಣ ಭಟ್***
**ಭಿವಾಡಿ**

# ಮಹಿಳೆಯರಲ್ಲಿ ಆತ್ಮವಿಶ್ವಾಸ ಹೆಚ್ಚಿಸಬೇಕು

## - ಶ್ಯಾಮಲ ಎಸ್. ಕುಂದರ್



ಒಳಹೊರಗಿನ ಬದುಕಿನಲ್ಲಿ ಮಹಿಳೆಗೆ ಮುಖ್ಯವಾಗಿ ಬೇಕಿರುವುದು ಆತ್ಮವಿಶ್ವಾಸ. ಈ ಆತ್ಮವಿಶ್ವಾಸವನ್ನು ಹೆಚ್ಚಿಸುವ ಜವಾಬ್ದಾರಿ ನಮ್ಮ ಸಮಾಜಕ್ಕಿದೆ ಎಂದು ರಾಷ್ಟ್ರೀಯ ಮಹಿಳಾ ಆಯೋಗ ಸದಸ್ಯೆ ಶ್ಯಾಮಲ ಎಸ್. ಕುಂದರ್ ಹೇಳಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ದಿನಾಂಕ 09.08.2020ರಂದು ಫೇಸ್‌ಬುಕ್ ನೇರಪ್ರಸಾರದ ಮೂಲಕ ನಡೆದ 'ಶಿಕ್ಷಣ: ಮಹಿಳೆ ಮತ್ತು ಮಕ್ಕಳು' ವಿಚಾರದ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.

ಶಿಕ್ಷಣ ಹಾಗೂ ಉದ್ಯೋಗದಲ್ಲಿ ಇಂದು ಮಹಿಳೆಯ ಮೇಲುಗೈ ಕಾಣುತ್ತೇವೆ. ಸರಕಾರದ ಯೋಜನೆಗಳಿಂದ ಮಹಿಳೆಯರಿಗೆ ಒಳ್ಳೆಯ ದಿನಗಳು ಬಂದಿವೆ. 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬಂತೆ ಹೆಣ್ಣಿಗೆ ಶಿಕ್ಷಣ ನೀಡಿದರೆ ಆಕೆಯ ಕುಟುಂಬವೇ ಶಿಕ್ಷಿತವಾಗುವುದು. ಕೊರೊನಾದ ಈ ಸಂದರ್ಭದಲ್ಲಿ ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಪಾಲಕರ, ಮುಖ್ಯವಾಗಿ ಮಹಿಳೆಯ ಜವಾಬ್ದಾರಿ ಹೆಚ್ಚಿದೆ. ಹಾಗೆಯೇ ಕಲಿಕೆಯು ಕೇವಲ ಪಠ್ಯಕ್ರಮಕ್ಕೆ ಸೀಮಿತವಾಗದೆ ಅದರಾಚೆಗೆ ನಿಲುಕುವ ಅನುಭವಗಳಿಂದ ಮಕ್ಕಳ ಶಿಕ್ಷಣವು ಕೂಡಿರಬೇಕು ಎಂದು ಹೇಳಿದರು.

ಕಾರ್ಯಕ್ರಮವನ್ನು ದೆಹಲಿ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ದೀನಾ ಜಾಯ್ಸ್ ನಡೆಸಿಕೊಟ್ಟರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಗೌರವ ಕಾರ್ಯದರ್ಶಿ ಡಾ. ಎಂ. ಎಸ್. ಶಶಿಕುಮಾರ್, ಗೌರವ ಖಜಾಂಚಿ ಟಿ. ಪಿ.ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿ ಸದಸ್ಯರಾದ ತಿಮ್ಮಪ್ಪ ಜಿ. ಆರ್., ಶ್ರೀಮತಿ ಮಾಲಿನಿ ಪ್ರಹ್ಲಾದ್, ಸಂತೋಷ್ ಕೆ. ಕೆ. ಹಾಗೂ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಪ್ರಶಾಂತ ಕುಮಾರ್ ಉಪಸ್ಥಿತರಿದ್ದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಉಪನ್ಯಾಸಕಿ ಶ್ರೀಮತಿ ಪ್ರೊಮೀಳಾ ದಹಿಯಾ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಕುಮಾರಿ ಬಿದಿಶಾ ವಂದಿಸಿದರು.

***ಅರವಿಂದ ಬಿಜೈ***

# ದೆಹಲಿ ಕನ್ನಡ ವಿದ್ಯಾ ಸಂಸ್ಥೆಯಲ್ಲಿ ಗಣೇಶ ಚತುರ್ಥಿ



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವತಿಯಿಂದ 'ಗಣೇಶ ಚತುರ್ಥಿ' ಹಬ್ಬವನ್ನು ಭಕ್ತಿ ಪೂರ್ವಕವಾಗಿ ಹಾಗೂ ಸರಳವಾಗಿ ಆಚರಿಸಲಾಯಿತು. ಹೂವಿನಿಂದ ಅಲಂಕೃತಗೊಂಡ ವಿದ್ಯೆ ಹಾಗೂ ಜ್ಞಾನದ ಅಧಿಪತಿಯಾದ ಗಣಪನಿಗೆ ಸಂಸ್ಥೆಯ ಸಂಸ್ಕೃತ ಶಿಕ್ಷಕ ಹಾಗೂ ಪಂಡಿತ ಗಣೇಶ ಹೆಗಡೆ ಅವರ ಪೌರೋಹಿತ್ಯದಲ್ಲಿ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಗೌರವ ಕಾರ್ಯದರ್ಶಿ ಡಾ. ಎಂ. ಎಸ್. ಶಶಿಕುಮಾರ್ ಅವರು ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು.

ಉಪಾಧ್ಯಕ್ಷ ಚಂದ್ರಶೇಖರ ಎನ್.ಪಿ., ಕಾರ್ಯಕಾರಿ ಸಮಿತಿ ಸದಸ್ಯರಾದ ಮಾಲಿನಿ ಪ್ರಹ್ಲಾದ್, ಬಿ. ಎನ್. ಮೋಹನ್ ಕುಮಾರ್ ಹಾಗೂ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಪ್ರಶಾಂತ ಕುಮಾರ್ ಉಪಸ್ಥಿತರಿದ್ದರು. ಶಿಕ್ಷಕ, ಶಿಕ್ಷಕೇತರ ವೃಂದದವರು ಪಾಲ್ಗೊಂಡು ವಿನಾಯಕನ ದರ್ಶನ ಪಡೆದರು. ಬಳಿಕ ಸಂಜೆ ವಿವಿಧ ಪೂಜಾ ವಿಧಿವಿಧಾನಗಳನ್ನು ಪಡೆದ ಗಣಪನನ್ನು ಶಾಲಾ ಪಠಾರದಲ್ಲಿ ವಿಸರ್ಜನೆ ಮಾಡಲಾಯಿತು.

***ಅರವಿಂದ ಬಿಜೈ***

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಸ್ವಾತಂತ್ರ್ಯೋತ್ಸವ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಆಚರಿಸಿದ 74ನೇ ಸ್ವಾತಂತ್ರ್ಯೋತ್ಸವದಲ್ಲಿ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ರಾಷ್ಟ್ರಧ್ವಜಾರೋಹಣವನ್ನು ನೆರವೇರಿಸಿದರು.

ಅವರು 'ಸ್ವಾತಂತ್ರ್ಯದ ಈ ಸಂಭ್ರಮ, ಆಚರಣೆಯನ್ನು ಪ್ರತಿಯೊಬ್ಬ ಭಾರತೀಯನೂ ಆಚರಿಸುವಂತಾಗಬೇಕು. ಇಂದು ನಗರದ ರಸ್ತೆ ಹಾಗೂ ಬೀದಿ ಬದಿಯಲ್ಲಿ ಭಿಕ್ಷೆ ಬೇಡುವ ಮುಗ್ಧ ಕಂದಮ್ಮಗಳನ್ನು ಕಂಡಾಗ ಸ್ವಾತಂತ್ರ್ಯವು ಎಲ್ಲರಿಗೂ ಯಾಕೆ ದೊರಕಲಿಲ್ಲ ಅನ್ನುವ ಕೊರಗು ಮತ್ತೆ ಮತ್ತೆ ಕಾಡುತ್ತಿದೆ. ಸರಕಾರದ ಜೊತೆ ಸಾರ್ವಜನಿಕರು ಕೈಜೋಡಿಸಿ ಈ ದೇಶದ ಏಳಿಗೆಗೆ ಶ್ರಮಿಸಿದರೆ ಮುಂದಿನ ದಿನಗಳಲ್ಲಾದರೂ ಸ್ವಾತಂತ್ರ್ಯಕ್ಕೆ ನಿಜವಾದ ಅರ್ಥ ಬರುವುದು' ಎಂದು ಹೇಳಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಚಂದ್ರಶೇಖರ ಎನ್.ಪಿ., ಗೌರವ ಕಾರ್ಯದರ್ಶಿ ಡಾ. ಎಂ. ಎಸ್. ಶಶಿಕುಮಾರ್, ಗೌರವ ಖಜಾಂಚಿ ಟಿ.ಪಿ. ಬೆಳ್ಳಿಯಪ್ಪ, ಸಂಸ್ಥೆಯ ಕಾರ್ಯಕಾರಿ ಸದಸ್ಯರಾದ ಮಾಲಿನಿ ಪ್ರಹ್ಲಾದ್, ಗಿರೀಶ್ ಎಸ್., ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಪ್ರಶಾಂತ ಕುಮಾರ್ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರಾದ ಜೆಸಿಕಾ ಫೆರ್ನಾಂಡಿಸ್, ಶಿವರಾಮ ಎನ್. ಉಪಸ್ಥಿತರಿದ್ದರು.

***ಅರವಿಂದ ಬಿಜ್ಜೈ***



# ಕರ್ನಾಟಕ ಭವನದಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆ

ನವದೆಹಲಿಯ ಕರ್ನಾಟಕ ಭವನದಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ನಿವಾಸಿ ಆಯುಕ್ತರ ಕಛೇರಿ ಹಾಗೂ ಕರ್ನಾಟಕ ಭವನದ ಸಿಬ್ಬಂದಿ ಹಾಗೂ ಅಧಿಕಾರಿ ವರ್ಗದವರು ಹಾಜರಿದ್ದರು.

ನವದೆಹಲಿಯಲ್ಲಿ ಮೂರು ಕರ್ನಾಟಕ ಭವನಗಳಿದೆ. ಕರ್ನಾಟಕ ಭವನ-1ರಲ್ಲಿ ಮಾನ್ಯ ಎಸ್. ನಿಜಲಿಂಗಪ್ಪನವರಿಂದ ಶಂಕುಸ್ಥಾಪನೆಗೊಂಡು ಹೆಸರುವಾಸಿಯಾಗಿದ್ದ (ಕಾವೇರಿ) ಕಟ್ಟಡವನ್ನು ಕೆಡವಿ ಹೊಸ ಕಟ್ಟಡ ನಿರ್ಮಾಣವಾಗುತ್ತಿರುವುದರಿಂದ ಈ ಬಾರಿ ಕರ್ನಾಟಕ ಭವನ-2ರ ಶರಾವತಿಯಲ್ಲಿ ವಿಜಯ ರಂಜನ್ ಸಿಂಗ್, ಐ.ಎಫ್.ಎಸ್, ವಿಶೇಷ ನಿವಾಸಿ ಆಯುಕ್ತರು, ಶ್ರೀಮತಿ ಮೀರಾ ಶ್ರೀವಾಸ್ತವ ಐ.ಆರ್.ಎಸ್, ವಿಶೇಷ ನಿವಾಸಿ ಆಯುಕ್ತರು, ಬಿ.ವಿ. ವಿಠ್ಠಲ್, ಉಪ ನಿವಾಸಿ ಆಯುಕ್ತರು, ಸಂಸದರ ಕೋಶ, ಡಾ. ಕಾರ್ತಿಕ್, ಡಾ. ಅನುರಾಧ ಬನ್ಸಾವರ್, ಈಶ್ವರ್ ಎನ್. ಕಟ್ಟಿಮನಿ, ಸಹಾಯಕ ಅಭಿಯಂತರು, ಕರ್ನಾಟಕ ಭವನ, ನವದೆಹಲಿ ಇವರ ಸಮ್ಮುಖದಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ನೇರವೇರಿಸಲಾಯಿತು.

ಕರ್ನಾಟಕ ಭವನ-3ರಲ್ಲಿ ಶ್ರೀಮತಿ ಗುರ್ನಿತ್ ತೇಜ್, ಭಾ.ಆ.ಸೇ, ಅಪರ ನಿವಾಸಿ ಆಯುಕ್ತರು, ಕರ್ನಾಟಕ ಭವನ ಇವರು ಧ್ವಜಾರೋಹಣ ಕಾರ್ಯಕ್ರಮವನ್ನು ನೇರವೇರಿಸಿ ಸಿಹಿ ಹಂಚಿದರು.

***ಎಸ್. ಕುಮಾರ್***





# ದಾಸ ಸಾಹಿತ್ಯ ಮಾನವ ಜೀವನದ ಶ್ರೇಷ್ಠತೆಯ ಅರಿವು ಮೂಡಿಸಿದೆ

## -ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ




**ಹಿರಿಯ ಸಾಹಿತಿ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ**

ಏನು ಬೇಡಲಿ ನಿನ್ನ ಬಳಿಗೆ ಬಂದು ಹಾಗೂ ಅಂತರಂಗದಲ್ಲಿ ಹರಿಯ ಕಾಣದವ ಹುಟ್ಟು ಕುರುಡನೋ, ಇವೆರಡನ್ನು ಸೇರಿಸಿದರೆ, ಇಡೀ ಬದುಕಿನ ಅರ್ಥ ನಮಗೆ ವೇದ್ಯವಾಗುತ್ತದೆ. ಹುಟ್ಟಿದ ಪ್ರತಿಯೊಂದು ಜೀವಿಗೆ ತನ್ನದೇ ಆದ ಮೌಲ್ಯವಿದೆ. ಹುಟ್ಟು ಮತ್ತು ಸಾವಿನ ಮಧ್ಯದ ಬದುಕು, ಸಾವಿನ ನಂತರದ ಘಟ್ಟ. ಹುಟ್ಟು ಅನಿರೀಕ್ಷಿತ, ಸಾವು ಖಚಿತ ಇವೆರಡರ ಮಧ್ಯದ ಬದುಕು ಲೌಖಿಕ. ಈ ಎರಡೂ ಒಂದು ನಾಣ್ಯದ ಎರಡು ಮುಖಗಳಂತೆ ಎಂದು ದೃಷ್ಟಾಂತದ ಮೂಲಕ ಇತಿಹಾಸ ತಜ್ಞ, ಸಾಹಿತಿ ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ತಿಳಿಸಿದರು.

ಅವರು ದಿನಾಂಕ 16.08.2020ರಂದು ನವದೆಹಲಿಯ ದಿನಕರ ಫೌಂಡೇಶನ್ ಆಯೋಜಿಸಿದ್ದ ನಿಸ್ತಂತು ಮಾಧ್ಯಮ ಕಾರ್ಯಕ್ರಮದಲ್ಲಿ 'ರಂಗಭೂಮಿಗೆ ದಾಸ ಸಾಹಿತ್ಯದ ಕೊಡುಗೆ' ಕುರಿತ ಸಂವಾದದಲ್ಲಿ ಮಾತನಾಡುತ್ತಿದ್ದರು.

ಬದುಕಿನ ಸಲುವಾಗಿ ಭಯ ಆವರಿಸಿದ ಸಂದರ್ಭ ಭಕ್ತಿಯ ಉತ್ಪನ್ನವಾಯಿತು. ವಿಷಯ ವಸ್ತುಗಳನ್ನು ಕಂಡಾಗ ವಸ್ತುಗಳ ಕುರಿತಾಗಿ ಭಯ ಭಕ್ತಿ ಹುಟ್ಟಿಕೊಂಡಿತು ಎಂದರು. ಕರ್ನಾಟಕದಲ್ಲಿ ಎರಡು ರೀತಿಯ ಭಕ್ತಿ ಸಂಪ್ರದಾಯಗಳು ಹುಟ್ಟಿಕೊಂಡವು. 10–11ನೇ ಶತಮಾನದಲ್ಲಿ ಜಗಜ್ಯೋತಿ ಬಸವೇಶ್ವರರ ವಚನ ಚಳುವಳಿ, 13 ಹಾಗೂ 14ನೇ ಶತಮಾನದಲ್ಲಿ ದಾಸ ಸಾಹಿತ್ಯದ ಮೂಲಕ ಭಕ್ತಿ ಪಂಥವಾಗಿ ಹರಿದಾಸರ ಕೀರ್ತನೆಗಳು ಜನರ ಮನ ಮನೆ ಸೇರಿದವು. ದಾಸ ಸಾಹಿತ್ಯ ಜನ ಸ್ವೀಕಾರಾರ್ಹವಾಯಿತು. ಪಂಪ ರನ್ನ ಹರಿಹರಾದಿಗಳು ಕಾವ್ಯಗಳ ಮೂಲಕ ದೇಶೀಯತೆಯನ್ನು ತಂದರು. ಪುರಂದರಾದಿ ದಾಸರುಗಳು ಅದನ್ನು ಮನ–ಮನೆಗೆ ಮುಟ್ಟಿಸಿದರು ಎಂದು ಹೇಳಿದರು.

ದಾಸರು ಮಾನವ ಜನ್ಮ ದೊಡ್ಡದು ಇದನ್ನು ಹಾನಿಮಾಡಬೇಡಿ ಹುಚ್ಚಪ್ಪಗಳಿರಾ ಎಂದು ಮಾನವ ಜೀವನದ ಶ್ರೇಷ್ಠತೆಯ ಬಗೆಗೆ ಜನಸಾಮಾನ್ಯರಲ್ಲಿ ತಿಳುವಳಿಕೆ ಮೂಡಿಸಿದರು. ಏನು ಸುಖವೋ ಎಂಥ ಸುಖವೋ, ಬಂದದ್ದು ಬರಲಿ ಆ ಗುರುವಿನ ದಯೆ ಒಂದಿರಲಿ ಎಂಬ ಕರೆ ಸಾಮಾನ್ಯ ಜನರಿಗೂ ಕೂಡಾ ಆಪ್ಯಾಯಮಾನವಾಯಿತು.

ಕನಕ–ಪುರಂದರರಾದಿಯಾಗಿ ಅನೇಕ ದಾಸವರೇಣ್ಯರು ದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಅವುಗಳ ಮೂಲಕ ಸಮಾಜಕ್ಕೆ ಅಮೂಲ್ಯ ಕಾಣಿಕೆ ನೀಡಿದ್ದಾರೆ ಎಂದು ಡಾ. ಕುಲಕರ್ಣಿ ಅವರು ತಿಳಿಸಿದರು. ಇದು ಜನರನ್ನೊಳಗೊಂಡ ಸಾಹಿತ್ಯವಾಗಿ ರೂಪುಗೊಂಡಿತು ಎಂದು ಹೇಳಿದರು.

ಎಲ್ಲ ವರ್ಗದವರಿಗೂ ಸಮಾನ ಭಾಗವಹಿಸುವಿಕೆಗೆ ಅವಕಾಶ ಕಲ್ಪಿಸಿತು. ಆಧ್ಯಾತ್ಮದ ಮೂಲಕ ಹೋಗಬೇಕಾದರೆ ಭಕ್ತಿಯೇ ಮೂಲ. ಹರಿದಾಸ ಸಾಹಿತ್ಯವು ಜನರ ಮಧ್ಯದಲ್ಲಿ, ಜನರಿಂದ ಹುಟ್ಟಿಕೊಂಡ ಸಾಹಿತ್ಯವಾಗಿದೆ ಎಂದರು. ಜನರ ಆಡುಭಾಷೆಯಲ್ಲಿಯೇ ಹಾಡಿನ ಮೂಲಕ ಜನಮಾನಸದಲ್ಲಿ ದಾಸ ಸಾಹಿತ್ಯವು ನೆಲೆ ನಿಂತಿತು. ಕಂಡುಂಡುದ್ದನ್ನು ಅನುಭವಿಸಿ ಹಾಡಿದಾಗ ಅದು ಜನರಿಗೆ ಸಂಬಂಧಿಸಿದ್ದಾಗಿತ್ತು. ಲೋಕಾನುಭವ, ಭಾವತನ್ಮಯತೆಯಲ್ಲಿ ಮೂಡಿ ಬಂದ ಕೃತಿ ಅಂದಿನ ಸಂದರ್ಭಕ್ಕೆ ಭಾವಗೀತೆಗಳಾದವು ಎಂದು ಹೇಳಿದರು. ಭಾವಗೀತೆಯ ಎಲ್ಲಾ ಲಕ್ಷಣಗಳು ಹರಿದಾಸ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ದಾಸ ಸಾಹಿತ್ಯವು ಜನತಾ ಶಿಕ್ಷಣ. ಉತ್ತಮ ಸಾಹಿತ್ಯ ಸಂಗೀತಗಳ ಸಂಗಮವಾಗಿದ್ದು ಜನರನ್ನು ಸುಸಂಸ್ಕೃತರನ್ನಾಗಿಸುವ ಸಾಹಿತ್ಯವಾಗಿದೆ. ಜ್ಞಾನ ಭಕ್ತಿಗಳ ಜೊತೆಗೆ ವೈರಾಗ್ಯದ ಕುರಿತಾಗಿ ಬೋಧಿಸಿವೆ. ಹರಿದಾಸ ಸಾಹಿತ್ಯದಲ್ಲಿ ನೀತಿ, ಶೀಲ, ನೈತಿಕತೆಗಳು ಆದ್ಯ ವಿಷಯವಾಗಿವೆ. ಸರಳ ಜೀವನದ ಪ್ರಾಮುಖ್ಯತೆ ಹರಿದಾಸ ಸಾಹಿತ್ಯದಲ್ಲಿ ಕಾಣಬಹುದಾಗಿದೆ ಎಂದು ಅವರು ಹೇಳಿದರು.

ದಾಸರು ನೀತಿ, ಶೀಲ, ನ್ಯಾಯದ ಬಗ್ಗೆ ಜನರಲ್ಲಿ ಅರಿವು ಮೂಡಿಸಿದ್ದಾರೆ. ಸಾಹಿತ್ಯ ಸಂಗೀತಗಳ ಸಾಮರಸ್ಯ ಮೆರೆದಿರುವ ದಾಸ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರು.

'ಹಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ' ಅದ್ಭುತ ಕೀರ್ತನೆ. ಶ್ರೀಪಾದರಾಯರು, ವ್ಯಾಸರಾಯರು, ವಾದಿರಾಜರು, ಪುರಂದರ ದಾಸರು, ಕನಕದಾಸರು, ಕಾಖಂಡಕಿಯ ಮಹಿಪತಿ ದಾಸರು, ಬಾಗಲಕೋಟೆಯ ಪ್ರಸನ್ನ ವೆಂಕಟದಾಸರು, ರಾಯಚೂರಿನ ವಿಜಯದಾಸರು, ಜಗನ್ನಾಥ ದಾಸರು, ಗೋಪಾಲದಾಸರು ಮುಂತಾದವರು ದಾಸ ಸಾಹಿತ್ಯಕ್ಕೆ ಅಪಾರ ಕೊಡುಗೆಯನ್ನಿತ್ತಿದ್ದಾರೆ ಎಂದರು. ದಾಸ ಸಾಹಿತ್ಯದಲ್ಲಿ ಧರ್ಮ,ನೀತಿ, ಸಂಸಾರ, ವೇದಾಂತ, ರಾಜಕಾರಣ, ಅರ್ಥನೀತಿ, ಸಾಮಾನ್ಯ ನೀತಿ, ವಿನೋದ, ಶೃಂಗಾರ ಈ ಎಲ್ಲಾ ಅಂಶಗಳು ಒಳಗೊಂಡಿವೆ ಎಂದು ಹೇಳಿದರು. ಮುಖ್ಯವಾಗಿ ಜೀವನ ಗಂಗೆಯ ಬೃಹದ್ದರ್ಶನವನ್ನೇ ಉಣಬಡಿಸಿದ್ದಾರೆ ಎಂದರು. ಭಾಷಾ ಬಾಂಧವ್ಯ ಪೋಣಿಸಿದ ಮಹಿಪತಿ ದಾಸರ ಕೃತಿಯ ವಿವರಣೆಯನ್ನು ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ ಅವರು ನೀಡಿದರು.

'ಕನ್ನಡ ರಂಗಭೂಮಿಗೆ ದಾಸ ಸಾಹಿತ್ಯದ ಪ್ರಭಾವ' ಸಂವಾದದಲ್ಲಿ ಮಾತನಾಡಿದ ಸಾಹಿತಿ ಡಾ. ರಾಮಕೃಷ್ಣ ಮರಾಠೆ ಅವರು ದಾಸ ಅನ್ನೋದು ಒಂದು ಮನೋಧರ್ಮ. ಯಾರಾದರೂ ದಾಸರಾಗಬಹುದು. ದಾಸ ಸಾಹಿತ್ಯವೂ ನಾಟಕಕಲೆಗೆ ಸಲ್ಲುತ್ತದೆ. ಶ್ರೀಕೃಷ್ಣ ಪಾರಿಜಾತ, ರಾಧಾನಾಟ ಮುಂತಾದ ದೊಡ್ಡಾಟ ಮತ್ತು ಸಣ್ಣಾಟಗಳಲ್ಲಿ ದಾಸ ಸಾಹಿತ್ಯವು ಹಾಸುಹೊಕ್ಕಾಗಿದೆ ಎಂದು ನುಡಿದರು. ಪುರಂದರ ದಾಸರ ಹಾಡುಗಳನ್ನು ಕೃಷ್ಣ ಭಕ್ತಿ ನಾಟಕಗಳಲ್ಲಿ ಕಾಣಬಹುದಾಗಿದೆ. ಸೀಮೆಯನ್ನು ಮುರಿಯುವ ಪ್ರಯತ್ನವನ್ನು ರಂಗಭೂಮಿ ಅನುಗಾಲವೂ ಮಾಡುತ್ತಾ ಬಂದಿದೆ. ದಾಸವರೇಣ್ಯರ ಜೀವನಾದರ್ಶಗಳುಳ್ಳ ನಾಟಕಗಳು ರಚಿತವಾಗಿವೆ ಎಂದರು. ಜನಪದ, ಆಧುನಿಕ ಕಂಪನಿ ನಾಟಕಗಳು, ಹವ್ಯಾಸಿ ನಾಟಕಗಳಲ್ಲಿ ದಾಸರ ರಚನೆ ಹಾಗೂ ಕೀರ್ತನೆಗಳು ಬಳಕೆಯಲ್ಲಿದೆ ಎಂದರು. ಪುರಂದರ ದಾಸ ರಚಿತ ದೇವತಾ ಸ್ತುತಿಯೊಂದಿಗೆ ಶ್ರೀ ಕೃಷ್ಣ ಪಾರಿಜಾತದ ಆರಂಭವಾಗಿದೆ. ಶ್ರೀ ಕೃಷ್ಣ ಪಾರಿಜಾತದ ಗೊಲ್ಲತಿ ಸನ್ನಿವೇಶದಲ್ಲಿ ಪುರಂದರ ದಾಸರ ಸಾಹಿತ್ಯದ ಪ್ರಭಾವ ಹಾಗೂ ಸಾಹಿತ್ಯದ ಬಳಕೆಯಾಗಿದೆ ಮತ್ತು ಪಾರಿಜಾತದ ಪ್ರತಿ ಸನ್ನಿವೇಶದಲ್ಲಿಯೂ ದಾಸ ಸಾಹಿತ್ಯದ ಗೀತೆಗಳು ಕೇಳಸುತ್ತವೆ ಎಂದರು. ತಮಾಷೆ, ರಾಧಾನಾಟ ಹಾಗೂ ಪಾರಿಜಾತ ಇವು ಒಂದೇ ರಂಗ ಪ್ರಕಾರಗಳಾಗಿವೆ.

ಜೋಳದ ರಾಶಿ ದೊಡ್ಡನಗೌಡರ 1940ರಲ್ಲಿ ರಚಿತ 'ಕನಕದಾಸರು' ಮಹತ್ವದ ನಾಟಕವಾಗಿದೆ. ಶ್ರೀರಂಗರ 'ಶ್ರೀ ಪುರಂದರ' ನಾಟಕ ಉಲ್ಲೇಖನೀಯ ಎಂದರು. ಉದರ ವೈರಾಗ್ಯ

ಸೇರಿದಂತೆ ಶ್ರೀರಂಗರ ಹಲವು ನಾಟಕಗಳಲ್ಲಿ ದಾಸ ಸಾಹಿತ್ಯದ ಕೊಡುಗೆ ಅಪಾರವಾಗಿದೆ ಎಂದರು.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ದಾಸ ಸಾಹಿತ್ಯವು ಒಂದು ಜೀವಾಳ. ಕನ್ನಡ ನಾಡಿನಲ್ಲಿ ಎಲ್ಲ ಸ್ಥರದ, ಎಲ್ಲ ವರ್ಗದ ಜನರಲ್ಲಿ ಪಾರಂಪರಿಕವಾಗಿ ಉಳಿದುಕೊಂಡು ಬಂದಿದೆ. ಐದು ನೂರು ವರ್ಷದ ಇತಿಹಾಸದ ದಾಸ ಪರಂಪರೆಯಿದೆ. ಮೌಖಿಕ ರೂಪದಲ್ಲಿ ಇದ್ದ ದಾಸರ ಪದಗಳನ್ನು ಮೌಗ್ಲಿಂಗ್ ಅವರು 1850 ರಲ್ಲಿ ಸಂಗ್ರಹಿಸಿದರು. ಈಗ ಈ ಸಾಹಿತ್ಯ ಸಂಗ್ರಹದ ನಿಧಿಯೇ ಲಭ್ಯವಿದೆ.

ಭಕ್ತಿ ಪರಂಪರೆಯಲ್ಲಿ ದಾಸ ಸಾಹಿತ್ಯಕ್ಕೆ ವಿಶೇಷ ಸ್ಥಾನವಿದೆ. ದಾಸ ಸಾಹಿತ್ಯ ಪರಂಪರೆ, ಅದರ ಉಗಮ ಹಾಗೂ ಉಗಮಕ್ಕಿರುವ ಸಾಂಸ್ಕೃತಿಕ ಹಿನ್ನೆಲೆ, ಪ್ರಮುಖ ಲಕ್ಷಣಗಳು, ದಾಸ ಪರಂಪರೆಯ ಪ್ರಮುಖರು, ಸಾಮಾಜಿಕ ಬದುಕಿನ ನಡುವೆ ಸಾಹಿತ್ಯದ ಮಹತ್ವ, ಕನ್ನಡ ರಂಗಭೂಮಿಗೆ ಪ್ರಭಾವ ಹೀಗೆ ಹತ್ತು ಹಲವಾರು ಪ್ರಶ್ನೆಗಳ ಮೂಲಕ ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರು ಸಂವಾದವನ್ನು ಗಾಂಭೀರ್ಯದೆಡೆಗೆ ಕೊಂಡೊಯ್ದರು.

ಚಿತ್ರಕಲೆಯಲ್ಲಿ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಕುಂಚ ಕಲಾವಿದ ಸುಧೀರ್ ಫಡ್ನೀಸ್ ಅವರು ದಾಸ ಶ್ರೇಷ್ಠರ ರೇಖಾ ಚಿತ್ರ ಬಿಡಿಸಿದರು.

ಪಿಳ್ಳಂಗೋವಿ ಹಾಡಿಗೆ ನೃತ್ಯ ಕು. ವಾಸುಕಿ ದೇಶಪಾಂಡೆ, ಭಾಗ್ಯದ ಲಕ್ಷ್ಮೀ ಬಾರಮ್ಮ ಹಾಡಿಗೆ ಕು. ನಿಸರ್ಗ ಈಟಿ ಇವರು ಪ್ರಸ್ತುತಪಡಿಸಿದ ನೃತ್ಯ ಪ್ರೇಕ್ಷಕರ ಮೆಚ್ಚುಗೆ ಪಡೆದುಕೊಂಡವು. ಕು. ಧ್ವನಿನ್ ಎಚ್ ಹಾಗು ಗೆಳೆಯರು 'ಕನಕದಾಸರು' ಕುರಿತು ನಡೆಸಿಕೊಟ್ಟ ಕಿರು ನಾಟಕ ಮನ ಮುಟ್ಟಿತು. ಕು. ಅವನಿ ನೆಲ್ಲ ಹಾಗೂ ಕು. ಋತ್ವಿಕ ನೆಲ್ಲ ಇವರು ಎಂಥ ಠಾವಳಿಗಾರ ಹಾಗೂ ಹರಿನಾಮ ಸವಿ ಹಾಡನ್ನು ಕು.ಅಧೋಕ್ಷಜ ಬಹಳ ಇಂಪಾಗಿ ಹಾಡಿದರು.

ಶುಭಾ ದೇವಿಪ್ರಸಾದ ಅವರ ಏನು ಬೇಡಲೊ ನಿನ್ನ ಹಾಗೂ ತೂಗಿರೆ ರಾಯರ, ನಾಗರಂಜಿನಿ ಅವರ ಅಂತರಂಗದಲ್ಲಿ ಹರಿಯ..., ಗೋವಿಂದ ಗೋಪಾಲ ಹಾಗೂ ಇಕೋ ನೋಡೆ ರಂಗನಾಥನ. ಅಮರೇಶ ಅವರ ಪುರಂದರ ದಾಸರ ನಾನೇಕೆ ಬಡವನು, ನಾನೇಕೆ ಪರದೇಶಿ. ಮಮತಾ ಶಿವರಾಮ ಅವರ ದೂರು ಮಾಡುವರೇನೆ ರಂಗಯ್ಯನ. ಕು. ದೀಪ್ತಿ ಭಟ್ ಅವರ ಕಲ್ಯಾಣ ಹಾಗೂ ಸಮಜೋ ಭಾಯಿ ಸಕುನಾ, ಜಯಶ್ರೀ ಬಸವರಾಜ ಅವರ ಧರ್ಮಕ್ಕೆ ಕೈಬಾರದೀಕಾಲ, ಕು. ಪೂರ್ಣಿಮಾ ಅಡಿಗ ಅವರ ಚಿತ್ತಜನಯ್ಯನ ಚಿಂತಿಸು ಮನವೆ, ಗೋವಿಂದ ರಾಜ್ ಅವರ ರಾಗಿ ತಂದಿರಾ ಭಿಕ್ಷಕೆ ರಾಗಿ ತಂದಿರಾ ಹಾಡುಗಳು ಕಾರ್ಯಕ್ರಮವನ್ನು ಶ್ರೀಮಂತಗೊಳಿಸಿದವು.

ಸಂತೋಷ ಉಪಾಧ್ಯಾಯ ಕಾರ್ಯಕ್ರಮ ನಿರೂಪಿಸಿದರು. ತಾಂತ್ರಿಕ ನಿರ್ವಹಣೆ ಮಾಡಿ ವಂದನಾರ್ಪಣೆಯನ್ನು ರಮೇಶ ಟಿ.ಎಸ್ ಅವರು ಸಲ್ಲಿಸಿದರು. ಕಾರ್ಯಕ್ರಮಕ್ಕೆ ಸಹಾಯ ಹಾಗು ಸಹಕಾರವನ್ನು 'ದಿನಕರ' ಕಲಾವಿದರು ನೀಡಿದರು. ಜೂಮ್ ಮೀಟಿಂಗ್ ಮೂಲಕ ನಡೆದ ಈ ಕಾರ್ಯಕ್ರಮದಲ್ಲಿ ದೆಹಲಿ ಎನ್.ಸಿ.ಆರ್. ಹಾಗೂ ಕರ್ನಾಟಕದಿಂದ ಪ್ರೇಕ್ಷಕರು ಭಾಗವಹಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

***ಎಸ್.ಎಸ್ ಗೋವಿಂದರಾಜ್,***
**ಮೈಸೂರು**

## ಕಾವ್ಯಧಾರೆ

### ಕನಸು

ಮನದಾಳದ ಮಾತು
ಮನದಲ್ಲಿ ಉಳಿಯಿತು
ನೂರಾರು ಕನಸು
ಟಿಸಿಲೊಡೆದು ಮರವಾಗುತ್ತಿತ್ತು
ಆದರೆ ಕೊಡಲಿಬಿತ್ತು.

ಕನಸುಕಾಣೋದು ತಪ್ಪ
ನನಸಾಗದಿದ್ದಾಗ ಕೊರಗೊದು ತಪ್ಪ,
ತಪ್ಪುಗಳ ಎಣಿಸುತ್ತಾ ಬೆಪ್ಪಾದೆ ನಾನು

ಎಲ್ಲೋ ಏನೊ ಬಂದಿದ್ದೆ ಭಾಗ್ಯ
ಎಣಿಸುತ ಮಣಿಯುತ ನಿಂತ ಯೋಗ್ಯ
ಇರುವುದರಲ್ಲಿ ಸುಖಕಾಣು
ಬಾರದ ಭಾಗ್ಯವ ಹರಸುತ
ವಿಯೋಗಿ ಆಗದಿರು ವೈರಾಗಿ
ಮನಸನು ಮಣಿಸು ರಮಿಸು
ಆಮಿಷವ ಕೊಟ್ಟು ತಣಿಸು
ನಾಳೆಯ ಆಶಾಗೋಪುರದಲಿ
ಮನೆಮಾಡು ಇಂದು
ನಾಟಿದ್ದು ಬರುವುದು
ಸಿಹಿ ಸುದ್ದಿ ಎಂದು.

***ಲಾವಣ್ಯ ಬಸವರಾಜ***

### ಮೊಬೈಲ್ ಲೋಕ

ಮೊಬೈಲ್ ಪರದೆಯೇ ಹಾಗೆ,
ಕಬ್ಬಿಣ ಅಯಸ್ಕಾಂತದ ಹಾಗೆ,
ಕಣ್ಣು ಕೀಲಿಸದೆ ನೋಡುವ ನೋಟ,
ತನ್ಮಯತೆಯ ಪರಮಾವಧಿ ಈ ಆಟ,
ಏನಿದೆ ಏನಿಲ್ಲ ಮೋಜು ಮಸ್ತಿ ಬೇಕಾದಷ್ಟು
ಸಮಯ ಕಳೆದುದೇ ತಿಳಿಯದಷ್ಟು
ಆದರೂ ಎಂದಿಗೂ, ಎಂದೆಂದಿಗೂ ಆಗದಿರಿ
ವಿಕಿರಣ ಪಬ್ಜಿ ಬ್ಲೂ ವೇಲ್ ಇತ್ಯಾದಿಗಳ ಶಿಕಾರಿ
ಇನ್ನು ವಿಶಾಲ ಪ್ರಪಂಚ ಇದೆಯಲ್ಲ ಹೊರಗೆ,
ಆಟ ಪಾಠ ಕಸರತ್ತು ಬೇಕಲ್ಲ ತಮಗೆ
ವಾಟ್ಸಪ್, ಫೇಸ್‌ಬುಕ್, ಅಂತರ್ಜಾಲ
ಎಷ್ಟೆಲ್ಲ ಪೋಷಕರು ಸುಳಿಯಲ್ಲಿ ಸಿಕ್ಕಿಲ್ಲ!
ಪಾರ್ಕ್ ಕ್ರೀಡಾಂಗಣ ಸುರಕ್ಷಿತವಲ್ಲ??
ಇವರೊಂದಿಗೆ ಕಳೆಯಲು ನಿಮಗೆ ಸಮಯವೇ ಇಲ್ಲ
ಹಿಡಿಸುತ್ತಾರೆ, ಕೈಯಲ್ಲಿ ಉಳಿದುದೊಂದೇ ದಾರಿ,
ಅದೇ ಮೊಬೈಲ್ ಪ್ರಪಂಚದ ದಾರಿ

***ಪ್ರೇಮಾ ಎಲ್.ಬಿ.***

# ಗಣೇಶ ಮಿತ್ರ ಮಂಡಳಿಯಿಂದ 29ನೇ ವರ್ಷದ ಗಣೇಶೋತ್ಸವ

ದಿನಾಂಕ 23.08.2020ರಂದು ಗಣೇಶ ಮಿತ್ರ ಮಂಡಳಿಯಿಂದ ಆರ್. ಕೆ.ಪುರಂನಲ್ಲಿರುವ ಸರ್.ಎಮ್. ವಿಶ್ವೇಶ್ವರಯ್ಯ ಮೆಟ್ರೋ ನಿಲ್ದಾಣ ಸಮೀಪದ ಅರಳಿ ಕಟ್ಟೆಯಲ್ಲಿ ಪರಿಸರ ಸ್ನೇಹಿ ವಿನಾಯಕನ ಮೂರ್ತಿಯನ್ನು ಕೂರಿಸಿ ವಿಧಿ ವಿಧಾನದಿಂದ ಪೂಜೆ ಸಲ್ಲಿಸಲಾಯಿತು.

ಕಲಾವಿದ ಸುಧೀರ್ ಫಡ್ನೀಸ್ ಅವರು ಪೂಜಾ ಕಾರ್ಯವನ್ನು ನಡೆಸಿಕೊಟ್ಟರು. ಗಣೇಶ ಮಿತ್ರ ಮಂಡಳಿಯ ಶಶಿಕಾಂತ ಪಾಟೀಲ, ಟಿ.ಎಂ. ಮೈಲಾರಪ್ಪ, ಯು.ಎ. ಶರೀಫ, ಬಸವರಾಜ, ಶ್ರೀನಾಥ್ ಎನ್.ಆರ್. ಮತ್ತು ಕುಟುಂಬ, ಹರಿಪ್ರಿಯಾ, ಅಶೋಕ್ ಕುಮಾರ್, ನಾರಾಯಣ ಇವರೆಲ್ಲಾ ಪೂಜಾ ಕಾರ್ಯದಲ್ಲಿ ಪಾಲ್ಗೊಂಡರು.

ಅದೇ ದಿನ ಸಂಜೆ ಕರ್ನಾಟಕ ಫುಡ್ ಸೆಂಟರ್‌ನ ಹೊರ ಆವರಣದಲ್ಲಿ ಮಣ್ಣಿನ ಹೂ ಕುಂಡದಲ್ಲಿ ವಿಸರ್ಜನೆ ಮಾಡಿ ವಿನಾಯಕನ ಕೃಪೆಗೆ ಪಾತ್ರರಾದರು.

***ಹರಿಪ್ರಿಯಾ***



## ಶ್ರದ್ಧಾಂಜಲಿ

### ಕಲಾವಿದೆ ಪದ್ಮಾ ಸಂಪತ್ ಕುಮಾರನ್



ಪುಷ್ಕಿನ್ ಮೆಡಲ್ ಪ್ರಶಸ್ತಿ ವಿಜೇತ ಖ್ಯಾತ ನೃತ್ಯ ಕಲಾವಿದೆ ಪದ್ಮಾ ಸಂಪತ್ ಕುಮಾರನ್ ದಿನಾಂಕ 11.08.2020ರಂದು ಮುಂಬಯಿಯಲ್ಲಿ ನಿಧನರಾಗಿದ್ದಾರೆ.

'ಕಲ್ಪೆ ಮಾಮಿನಿ' ಗೌರವಕ್ಕೆ ಪಾತ್ರರಾಗಿದ್ದ ಇವರು ದೆಹಲಿ ಕರ್ನಾಟಕ ಸಂಘದ ಅಜೀವ ಸದಸ್ಯೆ.

ಸಂಘದೊಂದಿಗೆ ನಿರಂತರ ಒಡನಾಟ ಹೊಂದಿದ್ದ ಕಲಾವಿದೆ ಪದ್ಮಾ ಸಂಪತ್ ಕುಮಾರ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

### ಮಾಜಿ ಪ್ರಾಂಶುಪಾಲ ಜಿ.ಬಿ. ಹೆಗಡಿ



ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಶಾಲೆಯ ಪ್ರಾಂಶುಪಾಲರಾಗಿ (1996–2010) ಸೇವೆ ಸಲ್ಲಿಸಿದ್ದ ಜಿ.ಬಿ. ಹೆಗಡಿ ಅವರು ದಿನಾಂಕ 17.08.2020ರಂದು ನಿಧನರಾಗಿದ್ದಾರೆ.

ಅವರು ಜೆ.ಎಸ್.ಎಸ್. ವಿದ್ಯಾಸಂಸ್ಥೆಗಳಲ್ಲಿಯೂ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸಿದ್ದರು.

ಜಿ.ಬಿ. ಹೆಗಡಿ ಅವರು ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿದ್ದರು. ಅವರು 2011–13ರ ಕಾರ್ಯಾವಧಿಯಲ್ಲಿ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಜಿ.ಬಿ. ಹೆಗಡಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

### ದೆಹಲಿ ಪೋಲಿಸ್‌ನ ದೇವರಾಜ್



ದೆಹಲಿ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ದೇವರಾಜ್ ಅವರು ದಿನಾಂಕ 17.09.2020 ರಂದು ನಿಧನರಾಗಿದ್ದಾರೆ.

ದೇವರಾಜ್ ಅವರು ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿದ್ದರು. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಾಲೆಯ ಕನ್ನಡಪರ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು.

ದೇವರಾಜ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

# ಅಗಲಿದ ಕೇಂದ್ರ ಸಚಿವ, ನೆಚ್ಚಿನ ಜನನಾಯಕ ಸುರೇಶ್ ಅಂಗಡಿ



ಬೆಳಗಾವಿ ಲೋಕಸಭಾ ಕ್ಷೇತ್ರದಿಂದ ಗೆದ್ದು ಕೇಂದ್ರದಲ್ಲಿ ಸಚಿವರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸುರೇಶ್ ಚನ್ನಬಸಪ್ಪ ಅಂಗಡಿ ಅವರು ದಿನಾಂಕ 23.09.2020 ನಿಧನರಾಗಿದ್ದಾರೆ. ದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ಅವರಿಗೆ ಚಿಕಿತ್ಸೆ ಫಲಕಾರಿಯಾಗದೇ ವಿಧಿವಶರಾಗಿದ್ದಾರೆ.

65 ವರ್ಷದ ಸುರೇಶ್ ಅಂಗಡಿ ಅವರು ಕೇಂದ್ರದಲ್ಲಿ ರೈಲ್ವೆ ಇಲಾಖೆ ರಾಜ್ಯ ಸಚಿವರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಕರ್ನಾಟಕಕ್ಕೆ ಸಂಬಂಧಿಸಿದಂತೆ ಉಪಯುಕ್ತ ರೈಲ್ವೆ ಯೋಜನೆಗಳನ್ನು ಹಮ್ಮಿಕೊಂಡಿದ್ದರು. ಅವರ ಬದ್ಧತೆ ಮತ್ತು ಪ್ರಾಮಾಣಿಕ ಸೇವೆಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಶ್ಲಾಘಿಸಿದ್ದಾರೆ.

ನಾಲ್ಕು ಬಾರಿ ಲೋಕಸಭೆ ಸದಸ್ಯರಾಗಿ ಸುರೇಶ್ ಅಂಗಡಿ ಆಯ್ಕೆಯಾಗಿದ್ದರು. 2004, 2009, 2014 ಮತ್ತು 2019ರ ಲೋಕಸಭೆ ಚುನಾವಣೆಯಲ್ಲಿ ಗೆದ್ದಿದ್ದರು.



ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮವೊಂದಕ್ಕೆ ಆಹ್ವಾನ ಸ್ವೀಕರಿಸುತ್ತಿರುವ ಕೇಂದ್ರ ಸಚಿವ ಸುರೇಶ್ ಅಂಗಡಿ

ಸಾರ್ವಜನಿಕ ಜೀವನಕ್ಕೆ ಪ್ರವೇಶಿಸುವ ಮೊದಲು ಅವರು ತಮ್ಮದೇ ಆದ ಖಾಸಗಿ ವ್ಯವಹಾರವನ್ನು ನಡೆಸುತ್ತಿದ್ದರು. ವಾಸವದತ್ತ ಸಿಮೆಂಟ್ [ಪ್ರಸ್ತುತ ಬಿರ್ಲಾ ಶಕ್ತಿ ಸಿಮೆಂಟ್] ಅನ್ನು ಯಶಸ್ವಿಯಾಗಿ ಚಾಲನೆಗೆ ತಂದು ಬೆಳಗಾವಿಯಲ್ಲೇ ಪ್ರಥಮ ಸ್ಥಾನಕ್ಕೆ ತಂದಿದ್ದರು. ಸುರೇಶ್ ಅಂಗಡಿ ಎಜ್ಯುಕೇಶನ್ ಫೌಂಡೇಶನ್ ಮೂಲಕ ವಿವಿಧ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದರು. ದೆಹಲಿ ಕರ್ನಾಟಕ ಸಂಘದ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಂಘದೊಂದಿಗೆ ಆತ್ಮೀಯ ಒಡನಾಟ ಹೊಂದಿದ್ದರು.

ಸಜ್ಜನ ರಾಜಕಾರಣಿ, ನೆಚ್ಚಿನ ಜನನಾಯಕ ಸುರೇಶ್ ಅಂಗಡಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

# ಗಾನ ಗಂಧರ್ವ ಎಸ್.ಪಿ. ಬಾಲಸುಬ್ರಹ್ಮಣ್ಯಂ ವಿಧಿವಶ



ಹಿರಿಯ ಗಾಯಕ, ಪದ್ಮ ಭೂಷಣ ಪ್ರಶಸ್ತಿ ಪುರಸ್ಕೃತ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ದಿನಾಂಕ 25.09.2020ರಂದು ವಿಧಿವಶರಾಗಿದ್ದಾರೆ.

ಕೊರೊನಾ ಸೋಂಕಿನ ಲಕ್ಷಣಗಳು ಕಂಡು ಬಂದ ಹಿನ್ನೆಲೆ ಆಗಸ್ಟ್ 5ರಂದು ಆಸ್ಪತ್ರೆಗೆ ದಾಖಲಾಗಿದ್ದರು. ಆ ಬಳಿಕದಿಂದ ಆಸ್ಪತ್ರೆಯಲ್ಲಿ ವೆಂಟಿಲೇಟರ್ ಮೂಲಕವೇ ಅವರಿಗೆ ಚಿಕಿತ್ಸೆ ನಿಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಅವರು ಮೃತಪಟ್ಟಿದ್ದಾರೆ.

ಜುಲೈನಲ್ಲಿ ಬಾಲಸುಬ್ರಹ್ಮಣ್ಯಂ ಅವರು ಕೊರೊನಾ ವಿರುದ್ಧ ಜಾಗೃತಿ ಮೂಡಿಸಲು ಸಾಹಿತಿ ವೈರಮುತ್ತು ರಚಿಸಿದ್ದ ಹಾಡಿಗೆ ಧ್ವನಿ ನೀಡಿದ್ದರು. ಇವರ ಕಲಾ ಸೇವೆಗೆ ಭಾರತ ಸರ್ಕಾರ ಪದ್ಮ ಭೂಷಣ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿತ್ತು.

1946ರ ಜೂನ್ 4 ರಂದು ಜನಿಸಿದ್ದ ಎಸ್‌ಪಿಬಿ ಕನ್ನಡ, ತಮಿಳು, ತೆಲುಗು, ಹಿಂದಿ, ಮಲೆಯಾಳಂ ಸೇರಿದಂತೆ ಒಟ್ಟು 16 ಭಾಷೆಗಳಲ್ಲಿ 40 ಸಾವಿರಕ್ಕೂ ಹೆಚ್ಚು ಹಾಡನ್ನು ಹಾಡಿದ್ದಾರೆ.

ಎಸ್.ಪಿ. ಬಾಲಸುಬ್ರಹ್ಮಣ್ಯಂ ಭಾಷೆ, ಗಡಿಯನ್ನು ಮೀರಿದ ಕಲಾವಿದರಾಗಿದ್ದರು. ದಕ್ಷಿಣ ಭಾರತದ ಎಲ್ಲಾ ಭಾಷೆಗಳ ಚಿತ್ರಗಳಲ್ಲಿ ಹಾಡಿ ಸೈ ಎನಿಸಿಕೊಂಡಿದ್ದರು. ಹಿಂದಿ ಸಿನೇಮಾಗಳಗೆ ಅವರು 1980 ಮತ್ತು 1990ರ ದಶಕದಲ್ಲಿ ಅನೇಕ ಹಾಡುಗಳನ್ನು ಹಾಡಿದ್ದಾರೆ. 'ಏಕ್ ತುಜೆ ಕೆಲಿಯೆ' ಚಿತ್ರದ ಹಾಡಿಗೆ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿದ್ದರು.

ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರು ಶಾಸ್ತ್ರೀಯ ಸಂಗೀತವನ್ನು ಔಪಚಾರಿಕವಾಗಿ ಕಲಿತಿರಲೇ ಇಲ್ಲ ಎನ್ನಲಾಗಿದೆ. ಅವರ ತೆಲುಗು ಚಿತ್ರ 'ಶಂಕರಾಭರಣಂ'ನ ಹಾಡುಗಳು ಬಹಳ ಜನಪ್ರಿಯ. ಕನ್ನಡದ 'ಆನಂದ ಭೈರವಿ' ಸೇರಿದಂತೆ ಅನೇಕ ಚಿತ್ರಗಳಲ್ಲಿ ಅವರು ಹಾಡಿದ ಹಾಡುಗಳಲ್ಲಿ ಶಾಸ್ತ್ರೀಯ ಸಂಗೀತದ ಸ್ಪರ್ಶವಿದೆ.

ಮುಂದಿನ ಜನ್ಮದಲ್ಲಿ ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು ಎಂದು ಅವರು ಅನೇಕ ವೇದಿಕೆಗಳಲ್ಲಿ ಹೇಳಿ ಕನ್ನಡ ಪ್ರೀತಿಯನ್ನು ಮೆರೆದಿದ್ದಾರೆ.

ಅಗಲಿದ ಮೇರು ಗಾಯಕ ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

# ಜಿ.ಬಿ. ಹೆಗಡಿಯವರ ಶೈಕ್ಷಣಿಕ ಸೇವೆ ಶ್ಲಾಘನೀಯ

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ ಶ್ರೀ ಜಿ. ಬಿ. ಹೆಗಡಿಯವರು ನಿಧನರಾಗಿರುವುದು ವಿಷಾದನೀಯ.

1996 ರಿಂದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಿಕ್ಷಣ ಸಂಸ್ಥೆಯಲ್ಲಿ ಪ್ರಿನ್ಸಿಪಾಲ್‌ರಾಗಿ ಸುಮಾರು 14 ವರುಷ ಸೇವೆ ಸಲ್ಲಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಹೆಗಡಿ ಸರಳ ಸಜ್ಜನಿಕೆಯ ಸ್ವಭಾವದವರು. ತಮ್ಮ ಅಮೂಲ್ಯ ಸಮಯವನ್ನು ಬಡವರ ದೀನ ದಲಿತರ ಬಗ್ಗೆ ಅತಿ ಕಾಳಜಿ ವಹಿಸಿ ಅವರ ಬೇಡಿಕೆಯ ಈಡೇರಿಕೆಗೆ ಸಮಯವನ್ನು ಕೊಟ್ಟು ಅವರ ಪ್ರೀತಿಗೆ ಪಾತ್ರರಾಗುತ್ತಿದ್ದರು. 2010 ರಲ್ಲಿ ಇವರು ತಮ್ಮ ಪ್ರಿನ್ಸಿಪಾಲ್ ಹುದ್ದೆಗೆ ಸ್ವಯಂ ನಿವೃತ್ತಿ ತೆಗೆದುಕೊಂಡ ಕೆಲವೇ ದಿನಗಳಲ್ಲಿ ನೊಯಿಡಾದಲ್ಲಿ 2010 ರಿಂದ 2013ರವರೆಗೆ ಮೂರು ವರುಷ ಹಗಲು ರಾತ್ರಿ ಎನ್ನದೆ ಸೇವೆ ಸಲ್ಲಿಸಿ, ಜೆ.ಎಸ್.ಎಸ್. ಪಬ್ಲಿಕ್ ಸ್ಕೂಲಿನ ಸ್ಥಾಪಕ ಪ್ರಿನ್ಸಿಪಾಲ್‌ರಾಗಿ ಮಕ್ಕಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ ಕೀರ್ತಿಗೆ ಪಾತ್ರರಾಗಿದ್ದಾರೆ.

ನಂತರ ಜುಲೈ 2013 ರಿಂದ ಮಾರ್ಚ್ 2018 ರವರೆಗೆ ಧಾರವಾಡದ ಜೆ.ಎಸ್.



ಎಸ್. ಪಬ್ಲಿಕ್ ಶಾಲೆಯಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ಜೆ.ಎಸ್.ಎಸ್. ಸಂಸ್ಥೆಯ ಕೀರ್ತಿ ಪತಾಕೆಯನ್ನು ಮುಗಿಲೆತ್ತರಕ್ಕೆ ಬೆಳೆಸಿದ ಮಹಾವ್ಯಕ್ತಿ ಎನಿಸಿದರು.

ಕನ್ನಡಿಗರ ಮೇಲೆ ಅಪಾರ ಪ್ರೀತಿ ಇದ್ದ ಇವರು ಇಂದು ಇಲ್ಲ ಆದರೂ ಅವರ ಆಚಾರ, ವಿಚಾರ, ಭಕ್ತಿ, ಪ್ರೇಮ, ವಿಶ್ವಾಸ ನಾವು ಎಂದೂ ಮರೆಯಲಾರೆವು.

ಅವರ ಆತ್ಮಕ್ಕೆ ದೇವರು ಶಾಂತಿ ನೆಮ್ಮದಿ ನೀಡಲಿ. ಅವರ ಕುಟುಂಬದ ಎಲ್ಲ ಸದಸ್ಯರಿಗೂ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲೆಂದು ದೇವರಲ್ಲಿ ಪ್ರಾರ್ಥನೆ ಸಲ್ಲಿಸುತ್ತೇವೆ.

***ವಿ. ವಿ. ಬಿರಾದಾರ***



**ಕ್ರಿಕೆಟ್ ಪಂದ್ಯಾವಳಿಯಲ್ಲಿ ವಿಜೇತರನ್ನು ಅಭಿನಂದಿಸುತ್ತಿರುವ ಜಿ.ಬಿ. ಹೆಗಡಿ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮಾಜಿ ಕಾರ್ಯದರ್ಶಿ ಆಂಜನೀ ಗೌಡ ಮತ್ತು ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ, ಕಾರ್ಯಕಾರಿ ಸಮಿತಿ ಸದಸ್ಯ ಎನ್.ಆರ್. ಶ್ರೀನಾಥ್ ಮೊದಲಾದವರನ್ನು ಕಾಣಬಹುದು.**

## ಸಂತಾಪ

ದೆಹಲಿ ಕನ್ನಡ ಶಾಲೆ ಮಾಜಿ ಪ್ರಾಂಶುಪಾಲ, ಶಿಕ್ಷಣತಜ್ಞ, ಲೇಖಕ, ಜಿ.ಬಿ. ಹೆಗಡಿ ಅವರ ನಿಧನಕ್ಕೆ ದೆಹಲಿ ಕನ್ನಡಿಗ, ತುಳುವೆರ್ ಪತ್ರಿಕೆಗಳ ಸಂಪಾದಕ ಬಾ. ಸಾಮಗ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

ಪ್ರಾಂಶುಪಾಲರಾಗಿದ್ದಾಗ ಹೆಗಡಿ ಅವರು ದೆಹಲಿಯ ಕನ್ನಡಿಗರೆಲ್ಲರೂ ತಮ್ಮ ಮಕ್ಕಳನ್ನು ಕನ್ನಡ ಶಾಲೆಯಲ್ಲೇ ವಿದ್ಯಾಭ್ಯಾಸ ಮಾಡುವಂತೆ ಆಕರ್ಷಕಗೊಳಿಸಿದ್ದರು. ದೆಹಲಿ ಕನ್ನಡಿಗ ಪತ್ರಿಕೆ 1997ರಲ್ಲಿ ದೆಹಲಿಯಲ್ಲಿ ಏರ್ಪಡಿಸಿದ 14ನೇ ರಾಷ್ಟ್ರೀಯ ಕನ್ನಡ ಸಮ್ಮೇಳನದಲ್ಲಿ ಸನ್ಮಾನಿತರಾಗಿದ್ದರು ಎಂದು ಅವರು ಸ್ಮರಿಸಿದ್ದಾರೆ.

## ರಾಜ್ಯಸಭಾ ಸದಸ್ಯ ಅಶೋಕ ಗಸ್ತಿ ನಿಧನ



**ಕೊ**ರೊನಾ ಸೋಂಕಿತರಾಗಿದ್ದ ಬಿಜೆಪಿಯ ರಾಜ್ಯಸಭಾ ಸದಸ್ಯ ಅಶೋಕ ಗಸ್ತಿ ದಿನಾಂಕ 17.09.2020ರಂದು ನಿಧನರಾಗಿದ್ದಾರೆ.

ಕಳೆದ ಜುಲೈ 22ರಂದು ಅಶೋಕ ಗಸ್ತಿ ಅವರು ಬಿಜೆಪಿಯಿಂದ ರಾಜ್ಯಸಭೆ ಅವಿರೋಧವಾಗಿ ಆಯ್ಕೆಯಾಗಿದ್ದರು. ಆದರೆ ಮೊದಲ ಅಧಿವೇಶನದಲ್ಲಿ ಪಾಲ್ಗೊಳ್ಳುವ ಮೊದಲೇ ಅವರು ಇಹಲೋಕವನ್ನು ತ್ಯಜಿಸಿದ್ದಾರೆ.

ಅಗಲಿದ ಹಿರಿಯ ರಾಜಕಾರಣಿ ಅಶೋಕ ಗಸ್ತಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ಧವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ.
ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು-ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
Sept-2020, Vol. No.30, Issue No. 12, Price Rs.1/-
RNI Regn. No. 53405/91, DL-SW-1/4016/19-21
Date of Publication : Sept 8th / 9th, Posting Date :10th / 11th, Total Pages-20, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

